بِسۡمِ اللّٰہِ الرَّحۡمٰنِ الرَّحِیۡمِ نَحْمَدُہٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 01

ಸಂಚಿಕೆ: 09

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

12 ಮಾರ್ಚ್ 2020, 12 ಅಮಾನ್ 1399 ಹಿಜರಿ ಶಮ್‌ಸಿ,
16 ರಜಬ್ 1441 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

وَلَا یَحۡسَبَنَّ الَّذِیۡنَ کَفَرُوۡۤا اَنَّمَا نُمۡلِیۡ لَہُمۡ خَیۡرٌ لِّاَنۡفُسِہِمۡ ؕ اِنَّمَا نُمۡلِیۡ لَہُمۡ لِیَزۡدَادُوۡۤا اِثۡمًا ۚ وَلَہُمۡ عَذَابٌ مُّہِیۡنٌ ○

*(ಆಲಿ ಇಮ್ರಾನ್ 179)*

ಅಂದರೆ: ಅವಿಶ್ವಾಸಿಗಳನ್ನು ನಾವು ಸಡಿಲು ಬಿಡುವುದು ಅವರಿಗೆ ಗುಣಕರವೆಂದು ಅವರೆಂದಿಗೂ ಭಾವಿಸುವುದು ಬೇಡ. ನಾವು ಅವರಿಗೆ ಕಾಲಾವಧಿಯನ್ನು ಹೆಚ್ಚಿಸುವುದರ ಫಲವಾಗಿ ಖಂಡಿತವಾಗಿಯೂ ಅವರ ಪಾಪಗಳು ಮಾತ್ರ ಹೆಚ್ಚುತ್ತಲೇ ಹೋಗುತ್ತವೆ. ಅವರಿಗೆ ಅಪಮಾನಕರವಾದ ಶಿಕ್ಷೆ ಕಾದಿದೆ.

**ಯಾವ ವ್ಯಕ್ತಿಯು ತನ್ನ ದುರ್ಗುಣವನ್ನು ಮಾರ್ಪಾಡು ಮಾಡಬಯಸುತ್ತಾನೋ ಅವನಿಗೆ ಅಂತರಾಳದಿಂದ ಹಾಗೂ ದೃಢ ನಿಶ್ಚಯದಿಂದ ಪಶ್ಚಾತಾಪ ಮಾಡುವುದು ಅವಶ್ಯವಾಗಿರುತ್ತದೆ.**
**ನಮ್ಮ ಜಮಾಅತಿಗೆ ಶಕ್ತವಂತ ಮತ್ತು ಪೈಲ್ವಾನರ ಹಾಗೆ ಶಕ್ತಿಯುಳ್ಳವರು ಬೇಕಾಗಿಲ್ಲ. ಬದಲಾಗಿ ತನ್ನ ಗುಣಗಳನ್ನು ಪರಿವರ್ತಿಸಲು ಪ್ರಯತ್ನಿಸುವಂತಹ ಶಕ್ತಿಯುಳ್ಳವರು ಬೇಕಾಗಿದ್ದಾರೆ.**

# ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಪಶ್ಚಾತಾಪದ ಮೂರು ವಿಧಗಳು

ತೌಬ (ಪಶ್ಚಾತಾಪವು) ವಾಸ್ತವಿಕವಾಗಿ ನೈತಿಕತೆಯನ್ನು ಪಡೆಯಲು ಪ್ರಕಾಶದಾಯಕ ಹಾಗೂ ಸಹಾಯಕ ವಸ್ತುವಾಗಿದೆ. ಇದು ಮನುಷ್ಯನನ್ನು ಪರಿಪೂರ್ಣಗೊಳಿಸುತ್ತದೆ. ಅರ್ಥಾತ್ ಯಾವ ವ್ಯಕ್ತಿಯು ತನ್ನ ದುರ್ಗುಣಗಳನ್ನು ಮಾರ್ಪಾಡು ಮಾಡಬಯಸುತ್ತಾನೋ ಅವನು ಅಂತರಾಳದಿಂದ ಹಾಗೂ ದೃಢ ನಿಶ್ಚಯದಿಂದ ಪಶ್ಚಾತಾಪ ಪಡುವುದು ಅವಶ್ಯಕವಾಗಿರುತ್ತದೆ. ಹಾಗೆಯೇ ಈ ಮಾತುಗಳನ್ನು ಸಹ ನೆನಪಿಡಬೇಕಾಗಿದೆ ಪಶ್ಚಾತಾಪಕ್ಕೆ ಮೂರು ಶರತ್ತುಗಳಿವೆ. ಅದನ್ನು ಪಾಲಿಸದೇ ನೈಜ ಪಶ್ಚಾತಾಪ ಅದನ್ನು "ತೌಬತುನ್ನಸೂಹ್" ಎಂದು ಕರೆಯುತ್ತಾರೆ. ಅದು ಪಡೆಯಲು ಸಾಧ್ಯವಿಲ್ಲ.

ಈ ಮೂರು ಶರತ್ತುಗಳಲ್ಲಿ ಮೊದಲನೇಯ ಶರತ್ತು ಅದನ್ನು ಅರಬಿ ಭಾಷೆಯಲ್ಲಿ **'ಇಖ್‌ಲಾ'** ಎನ್ನುತ್ತಾರೆ. ಅಂದರೆ ಈ ಕೆಟ್ಟ ಭಾವನೆಗಳನ್ನು ಕೆರಳಿಸುವಂತಹ ಗುಣಗಳನ್ನು ತೊರೆಯಬೇಕಾಗಿದೆ. ವಾಸ್ತವದಲ್ಲಿ ಭಾವನೆಗಳು ಬಹುದೊಡ್ಡ ಪರಿಣಾಮಗಳನ್ನು ಬೀರುತ್ತದೆ. ಏಕೆಂದರೆ ನಡತೆ ಹೊಂದುವ ಮೊದಲು ಪ್ರತಿಕ್ರೀಯೆಯು ಒಂದು ಭಾವನಾತ್ಮಕ ಪರಿಸ್ಥಿತಿ ಹೊಂದಿರುತ್ತದೆ. ಆದ್ದರಿಂದ ಮೊದಲನೆಯ ಶರತ್ತು ಎಂದರೆ ಈ ಕೆಟ್ಟ ಭಾವನೆಗಳನ್ನು ಯಾವುದೇ ಸ್ತ್ರೀಯೊಂದಿಗೆ ಅನುಚಿತ ಸಂಬಂಧ ಹೊಂದಿದ್ದರೆ ಅವನಿಗೆ ಪಶ್ಚಾತಾಪ ಪಡೆಯಲಿಕ್ಕಾಗಿ ಮಾಡಲು ಅವಶ್ಯವಾದುದೇನೆಂದರೆ ಆಕೆಯನ್ನು ಕುರುಡು ಎಂದು ಭಾವಿಸಬೇಕು. ಹಾಗೂ ಎಲ್ಲಾ ದುರ್ನಡತೆಗಳನ್ನು ತನ್ನ ಮನಸ್ಸಿನಿಂದ ದೂರಮಾಡಬೇಕು. ಏಕೆಂದರೆ ಇದೀಗ ನಾನು ಹೇಳುವಂತೆ ಭಾವನೆಗಳ ಬಹು ದೊಡ್ಡ ಪ್ರಭಾವ ಬೀರುತ್ತದೆ. ನಾನು ಋಷಿ ಮುನಿಗಳ ಚರಿತ್ರೆಯಲ್ಲಿ ಓದಿರುತ್ತೇವೆ ಅವರ ಕಲ್ಪನೆಗಳಲ್ಲಿ ಏಷ್ಟರಮಟ್ಟಿಗೆ ಉನ್ನತಿ ಸಾಧಿಸಿದ್ದಾರೆ ಎಂದರೆ ಮನುಷ್ಯರನ್ನು ಕೋತಿ ಅಥವಾ ಹಂದಿಯ ರೂಪದಲ್ಲಿ ಕಂಡಿದ್ದಾರೆ. ಇವರ ತಾತ್ಪರ್ಯವೇನಂದರೆ ಯಾರು ಯಾವ ರೀತಿಯಲ್ಲಿ ಊಹಿಸುತ್ತಾರೋ ಅದರಂತೆ ಫಲ ಪಡೆಯುತ್ತಾರೆ. ಆದ್ದರಿಂದ ಕೆಟ್ಟ ಭಾವನೆಗಳನ್ನು, ಕೆಟ್ಟ ಚಟಗಳನ್ನು ತೊರೆಯಬೇಕು. ಇದು ಮೊದಲನೇಯ ಶರತ್ತಾಗಿದೆ.

ಎರಡನೇಯ ಶರತ್ತು **'ನದಮ್'** ಎಂದಾಗಿದೆ. ಅಂದರೆ ನಾಚಿಕೆ ಪಡುವುದಾಗಿದೆ. ಪ್ರತಿಯೊಬ್ಬ ಮನುಷ್ಯನ ಆತ್ಮವು ತನ್ನೊಳಗೆ ಪಾಪಗಳನ್ನು ಪೀಯೋಳಿಸುವಂತಹ ಶಕ್ತಿ ಹೊಂದಿರುತ್ತದೆ. ಆದರೆ ಸೌಭಾಗ್ಯದಿಂದ ಮನುಷ್ಯನು ಅದನ್ನು ನಿರ್ಲಕ್ಷಿಸುತ್ತಾನೆ ಆದ್ದರಿಂದ ಪಾಪಗಳ ಹಾಗೂ ಕೆಡತುಗಳ ಬಗ್ಗೆ ನಾಚಿಕೆ ವ್ಯಕ್ತ ಪಡಿಸಬೇಕು. ಮತ್ತು ಇವೂ ಈ ಸ್ವಾದಗಳು ಕ್ಷಣ ಮಾತ್ರದ್ದು ಮತ್ತು ಕೆಳದಿನಗಳದ್ದಾಗಿದೆ. ಎಂದು ಭಾವಿಸಬೇಕು ಈ ಸ್ವಾದಗಳು ಕ್ಷೀಣಿಸುವಂತಹದ್ದಾಗಿದೆ. ವೃದ್ಧಾವಸ್ಥೆಯಲ್ಲಿ ಶಕ್ತಿಗಳು ಕುಂದುತ್ತದೆ ಮತ್ತು ದುರ್ಬಲಗೊಳ್ಳುತ್ತದೆ ಎಂಬುದು ಭಾವಿಸುವುದು ಅವಶ್ಯವಾಗಿದೆ. ಅಂತಿಮವಾಗಿ ಈ ಎಲ್ಲಾ ಸ್ವಾಧಗಳನ್ನು ಬಿಡಬೇಕಾಗುತ್ತದೆ. ಆದ್ದರಿಂದ ಈ ಜೀವನದಲ್ಲಿಯೇ ಇವೆಲ್ಲಾ ಬಿಟ್ಟು ಹೋಗುವುದಾಗಿದೆ. ಎಂದರೆ ಅದನ್ನು ಮಾಡುವುದರಲ್ಲಿ ಅರ್ಥವಾದರೂ ಏನು? ಪಶ್ಚಾತಾಪ ಪಡುವ ಮನುಷ್ಯನು ಬಹಳ ಭಾಗ್ಯಶಾಲಿ ಆಗಿದ್ದಾನೆ. ಅವನಲ್ಲಿ ಮೊದಲು 'ಇಖ್ಲಾಅ' ಭಾವನೆ ಬೆಳೆಯಬೇಕು ಅಂದರೆ ಕೆಟ್ಟ ಭಾವನೆಗಳನ್ನು ತೊರೆಯಬೇಕು. ಈ ಕೆಟ್ಟತನ ಹೋಗಿ ಬಿಟ್ಟರೆ ಮತ್ತೆ ಅವನು ನಾಚಿಕೆ ಪಡಬೇಕು.

ಮೂರನೇಯ ಶರತ್ತು **'ಅಝ್ಮ್'** ಆಗಿದೆ. ಅಂದರೆ ಮುಂದಿನಕ್ಕಾಗಿ ದೃಢ ನಿಶ್ಚಯ ಮಾಡುವುದು. ದೃಢ ನಿಶ್ಚಯದಿಂದ ಆ ಕೆಡುಕು ಪದ್ಧತಿಗಳ ಕಡೆ ಹೋಗದೆ ಇರುವುದು. ಅದರ ಮೇಲೆ ಸ್ಥಿರತೆ ತೋರಿಸಿದರೆ ಅಲ್ಲಾಹನು ಅವನ ಈ ನೈಜ ಪಶ್ಚಾತಾಪ ಸ್ವೀಕರಿಸುವ ಭಾಗ್ಯ ನೀಡುವೆನು ಎಲ್ಲಿಯವರೆಗೆ ಎಂದರೆ ಆ ಕೆಡುಕುಗಳು ಒಳಿತುಗಳಲ್ಲಿ ಮಾರ್ಪಾಡಾಗುವುದು. ಇವು ಆ ನೀತಿಯ ವಿಜಯವಾಗಿದೆ. ಅದಕ್ಕೆ ಶಕ್ತಿ ನೀಡುವುದು ಅಲ್ಲಾಹನ ಕೆಲಸವಾಗಿದೆ ಏಕೆಂದರೆ ಅಲ್ಲಾಹನೇ ಸರ್ವಶಕ್ತಿಯುಳ್ಳವನಾಗಿದ್ದಾನೆ. ಅಲ್ಲಾಹನು ನುಡಿದಂತೆ **ಅನ್ನಲ್ ಖುವ್ವತ ಲಿಲ್ಲಾಹಿ ಜಮೀಅ** (ಅಲ್‌ಬಖರ: 166)

ಎಲ್ಲಾ ಶಕ್ತಿಗಳು ಅಲ್ಲಾಹನದ್ದಾಗಿದೆ ಮತ್ತು ಮನುಷ್ಯನು ದುರ್ಬಲನು ಹಾಗೂ ಹೀನ ವ್ಯಕ್ತಿತ್ವವುಳ್ಳವನಾಗಿದ್ದಾನೆ. **ಖುಲಿಖಲ್ ಇನ್ಸಾನು ಝುಯೀಫ** (ಅನ್ನಿಸಾ: 29) ಅದರ ವಾಸ್ತವವಾಗಿದೆ. ಆದ್ದರಿಂದ ಅಲ್ಲಾಹನಿಂದ ಶಕ್ತಿಯನ್ನು ಪಡೆಯಲು ಮೇಲ್ಕಾಣಿಸಿದ ಮೂರು ಶರತ್ತುಗಳನ್ನು ಪಾಲಿಸಿಕೊಂಡು ಮನುಷ್ಯನು ಅಲಕ್ಷ್ಯತನ ಹಾಗೂ ಆಲಸ್ಯ ಬಿಡಬೇಕಾಗಿದೆ ಮತ್ತು ಸರ್ವವಿಧದಿಂದಲೂ ಸಿದ್ಧಗೊಂಡು ಅಲ್ಲಾಹನಲ್ಲಿ ಪ್ರಾರ್ಥಿಸಬೇಕಾಗಿದೆ ಹಾಗೆ ಅಲ್ಲಾಹನು ಗುಣಗಳನ್ನು ಪರಿವರ್ತಿಸುವನು.

### ನಿಜವಾದ ಶಕ್ತಿವುಳ್ಳವು ಯಾರು?

ನಮ್ಮ ಜಮಾಅತ್ತಿನಲ್ಲಿ ಜಂಭ ತೋರಿಸುವವರು ಹಾಗೂ ಪೈಲ್ವಾನನ ಹಾಗೆ ಶಕ್ತಿಯುಳ್ಳವರು ಬೇಕಾಗಿಲ್ಲ. ಬದಲಾಗಿ ತನ್ನ ಗುಣಗಳಲ್ಲಿ ಮಾರ್ಪಾಡು

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

**ಪ್ರತಿಯೊಬ್ಬ ಅಹ್ಮದಿಯ ಮುಖವಾಡದ ಹಿಂದೆ ಅಹ್ಮದಿಯ್ಯತ್‌ನ ಮುಖವಾಡವಿದೆ. ಹಝ್ರ‌ರತ್ ಮಸೀಹ್ ಮೌಊದ್(ಅ) ಮತ್ತು ಇಸ್ಲಾಮಿನ ಮುಖವಾಡವಿದೆ.**

**ಈ ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರು ಇದನ್ನು ನಿಶ್ಚಯಿಸಬೇಕು. ಅಲ್ಲಾಹನ ಸಂಪ್ರೀತಿ ಪಡೆಯಲು ಪೂರ್ಣರೂಪದಲ್ಲಿ ಪ್ರಯತ್ನ ಪಡುವವನಾಗುವನು. ಈ ಮೂರು ದಿನಗಳಲ್ಲಿ ಲೋಕದ ವ್ಯಾಮೋಹ ಬರಕೂಡದು. ಬದಲಿಗೆ ನೀವು ಈ ಜಲ್ಸದ ಸಕಾರಾತ್ಮಕ ಪರಿಸರದಿಂದ ಪ್ರಯೋಜನ ಪಡಬೇಕಾಗಿದೆ. ಅಲ್ಲಾಹನ ಸ್ಮರಣೆಯಲ್ಲಿ ತನ್ಮಯವಾಗಿರಬೇಕಾಗಿದೆ ಮತ್ತು ತನ್ನ ಆಧ್ಯಾತ್ಮಿಕ ಹಾಗೂ ನೈತಿಕ ಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನ ಪಡಬೇಕಾಗಿದೆ**

**ಒಬ್ಬ ಮನುಷ್ಯನು ಅಲ್ಲಾಹನೊಂದಿಗೆ ನಿಜವಾದ ಪ್ರೀತಿ ಹಾಗೂ ಸರಿಯಾದ ಸಂಬಂಧವನ್ನು ಸ್ಥಾಪನೆ ಮಾಡಿದರೆ ಹಾಗೂ ತನ್ನ ಸೃಷ್ಟಿಕರ್ತನನ್ನು ಯಾವುದೇ ಸ್ಥಿತಿಯಲ್ಲೂ ಮರೆಯದಿದ್ದರೆ ಅಲ್ಲಾಹನು ಸಹ ಅವನ ಕೈ ಬಿಡುವುದಿಲ್ಲ.**

## ಸೆಪ್ಟೆಂಬರ್ 13 ರಿಂದ 15, 2019ರಲ್ಲಿ ಆಯೋಜಿಸಲಾದ 34ನೇ ಜಲ್ಸ ಸಾಲಾನ ಮಲೇಶಿಯಾದ ಸುವರ್ಣ ಸಂದರ್ಭದಲ್ಲಿ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫರ ವಿಶೇಷ ಸಂದೇಶ

بسم اللہ الرحمٰن الرحیم

نحمدہ و نصلی علی رسولہ الکریم وعلی عبدہ المسیح الموعود

خدا کے فضل اور رحم کے ساتھ

ھو النّاصر

ಪ್ರೀತಿಯ ಮಲೇಷಿಯ ಜಮಾಅತ್ತಿನ ಸದಸ್ಯರೆ,

**ಅಸ್ಸಲಾಮು ಅಲೈಕುಲ್ ವರಹ್ಮತುಲ್ಲಾಹಿ ವ ಬರಕಾತಹು** السلام علیکم ورحمۃ اللہ وبرکاتہ

13, 14 ಮತ್ತು 15 ಸೆಪ್ಟೆಂಬರ್ 2019ರಂದು ತಮ್ಮ 34ನೇ ಜಲ್ಸ ಸಾಲಾನ ಏರ್ಪಡಿಸುತ್ತಿದ್ದೀರಿ ಅಲ್ಲಾಹನು ಈ ಜಲ್ಸವನ್ನು ಉನ್ನತ ಮಟ್ಟದಲ್ಲಿ ಯಶಸ್ಸುಗೊಳಿಸಲಿ ಮತ್ತು ಇದರಲ್ಲಿ ಭಾಗವಹಿಸುವವರಿಗೆ ಆಧ್ಯಾತ್ಮಿಕ ಅನುಗ್ರಹಗಳನ್ನು ಪಡೆಯುವ ಜೊತೆಯಲ್ಲಿ ಅವರ ಸತ್ಕರ್ಮ ಹಾಗೂ ಭಯಭಕ್ತಿಯಲ್ಲಿ ಪ್ರಗತಿ ಸಾಧಿಸುವಂತೆ ಮಾಡಲಿ.

ನಾನು ಜರ್ಮನಿ ಜಲ್ಸದಲ್ಲಿ ತಿಳಿಸಿದಂತೆ ಯಾವ ಅನುಗ್ರಹಗಳನ್ನು ಹಝ್ರ‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಅಲ್ಲಾಹನು ನೀಡಿದ ವಾಗ್ದಾನಗಳಲ್ಲಿ ಜಲ್ಸ ಸಾಲಾನವೂ ಒಂದಾಗಿದೆ. ಇದು ನಿಮ್ಮ ಆಧ್ಯಾತ್ಮಿಕ, ನೈತಿಕ ಹಾಗೂ ಬೌದ್ಧಿಕ ಸಾಮರ್ಥ್ಯಗಳನ್ನು ವೃದ್ಧಿಸಲು ಹಾಗೂ ಅಲ್ಲಾಹನ ಸಾಮಿಪ್ಯ ಪಡೆಯಲು ಒಂದು ಅತ್ಯುತ್ತಮ ಮಾರ್ಗವಾಗಿದೆ.

ಇದು ನಮ್ಮ ಹೃದಯಗಳನ್ನು ಪರಿಶುದ್ಧಗೊಳಿಸಲು ಸಹಾಯಕವಾಗುತ್ತದೆ. ಇದರಿಂದ ಇತರರ ಮೇಲಿರುವ ತಮ್ಮ ಹೊಣೆಗಾರಿಕೆಗಳನ್ನು ಪೂರ್ಣಗೊಳಿಸಲು ಮತ್ತು ಹಝ್ರ‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿದಿಸಿದ ಜಲ್ಸಗಳ ಉದ್ದೇಶಗಳನ್ನು ಪೂರ್ಣಗೊಳಿಸಲು ಸಹಾಯಕವಾಗುತ್ತದೆ.

ಆದ್ದರಿಂದ ಈ ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರು ಇದನ್ನು ನಿಶ್ಚಯಿಸಬೇಕು. ಅಲ್ಲಾಹನ ಸಂಪ್ರೀತಿ ಪಡೆಯಲು ಪೂರ್ಣರೂಪದಲ್ಲಿ ಪ್ರಯತ್ನ ಪಡುವವನಾಗುವನು. ಈ ಮೂರು ದಿನಗಳಲ್ಲಿ ಲೋಕದ ವ್ಯಾಮೋಹ ಬರಕೂಡದು. ಬದಲಿಗೆ ನೀವು ಈ ಜಲ್ಸದ ಸಕಾರಾತ್ಮಕ ಪರಿಸರದಿಂದ ಪ್ರಯೋಜನ ಪಡಬೇಕಾಗಿದೆ. ಅಲ್ಲಾಹನ ಸ್ಮರಣೆಯಲ್ಲಿ ತನ್ಮಯವಾಗಿರಬೇಕಾಗಿದೆ ಮತ್ತು ತನ್ನ ಆಧ್ಯಾತ್ಮಿಕ ಹಾಗೂ ನೈತಿಕ ಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನ ಪಡಬೇಕಾಗಿದೆ ನಿಮ್ಮ ಪರಸ್ಪರ ದೂರುಗಳನ್ನು ಹಾಗೂ ಉದಾಸೀನತೆಯನ್ನು ಐಕ್ಯ ಮತದಲ್ಲಿ ಪರಿವರ್ತಿಸಿಕೊಳ್ಳಬೇಕಾಗಿದೆ ಅಂತೆಯೇ ವರ್ಥ ಮಾತುಗಳನ್ನು ಬಿಡಬೇಕಾಗಿದೆ.

ನೆನಪಿಡಿ ಹಝ್ರ‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಮಾಡಿದ ಬೈಅತ್ ವಚನದಂತೆ ಹಾಗೂ ಹಝ್ರ‌ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರೊಂದಿಗಿನ ಪ್ರೀತಿ, ನಿಮ್ಮ ಹೃದಯದಲ್ಲಿ ಲೋಕದ ಪ್ರೀತಿಗಿಂತ ಹೆಚ್ಚಿನದಾಗಿದ್ದರೆ ನೀವು ಜಲ್ಸದಲ್ಲಿ ಭಾಗವಹಿಸುವುದು ವ್ಯರ್ಥವಾಗಬಹುದು. ನೀವು ನಿಮ್ಮ ಜೀವನವನ್ನು ಅಲ್ಲಾಹನ ಮತ್ತು ಅವನ ಪ್ರವಾದಿಯ ನಿರ್ದೇಶನಗಳಂತೆ ಜೀವಿಸಬೇಕಾಗಿದೆ.

ಒಬ್ಬ ಮನುಷ್ಯನು ಅಲ್ಲಾಹನೊಂದಿಗೆ ನಿಜವಾದ ಪ್ರೀತಿ ಹಾಗೂ ಸರಿಯಾದ ಸಂಬಂಧವನ್ನು ಸ್ಥಾಪನೆ ಮಾಡಿದರೆ ಹಾಗೂ ತನ್ನ ಸೃಷ್ಟಿಕರ್ತನನ್ನು ಯಾವುದೇ ಸ್ಥಿತಿಯಲ್ಲೂ ಮರೆಯದಿದ್ದರೆ ಅಲ್ಲಾಹನು ಸಹ ಅವನ ಕೈ ಬಿಡುವುದಿಲ್ಲ. ಹಝ್ರ‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮಿಂದ ಇದನ್ನೇ ಬಯಸುತ್ತಾರೆ. ನಮ್ಮಲ್ಲಿ ಎಲ್ಲರೂ ಈ ಸ್ಥಿತಿಗೆ ತಲುಪಲು ಪ್ರಾರ್ಥನೆಯೊಂದಿಗೆ ಪ್ರಯತ್ನ ಶೀಲರಾಗಬೇಕಾಗಿದೆ. ಆಗ ಮಾತ್ರ ಅಲ್ಲಾಹನು ನಮ್ಮನ್ನು ಸ್ಮರಿಸುವನು. ಅಲ್ಲಹನು ಹೇಳುವನು ಉಝ್ಕುರುಲ್ಲಾಹು ಉಝ್ಕುರುಕುಮ್ ನೀವು ಅಲ್ಲಾಹನನ್ನು ಸ್ಮರಿಸಿರಿ ಅಲ್ಲಾಹನು ನಿಮ್ಮನ್ನು ಸ್ಮರಿಸುವನು ಅವನು ಭಾಗ್ಯಶಾಲಿಯಾಗುವನು ಮತ್ತು ಅವನ ಮೇಲೆ ಅಲ್ಲಾಹನ ಅಸಂಖ್ಯಾತ ಅನುಗ್ರಹಗಳಿರುವವು. ಏಕೆಂದರೆ ಅವರು ಅವನನ್ನು ಮರೆಯುವುದಿಲ್ಲ. ತಮ್ಮ ಜಲ್ಸದ ಡ್ಯೂಟಿಯಲ್ಲಿ ಭಾಗವಹಿಸಿದ್ದ ಸದಸ್ಯರು ಅಲ್ಲಾಹನ ಸಾನಿಧ್ಯವನ್ನು ಪಡೆಯಲು ತನ್ನನ್ನು ತಾನು ಅಲ್ಲಾಹನ ಸ್ಮರಣೆಯಲ್ಲಿ ತೊಡಗಿಸಿಕೊಳ್ಳಬೇಕು.

ನಾನು ನಿಮಗೆ ಒತ್ತಾಯ ಪೂರ್ವಕವಾಗಿ ಹೇಳುವೆನು ಅಲ್ಲಾಹನನ್ನೇ ಸ್ಮರಿಸಿರಿ ಮತ್ತು ನಮಾಝ್‌ಗಳನ್ನು ನಿರ್ವಹಿಸಿರಿ. ಅದು ಜಲ್ಸಗಳ ಚಟುವಟಿಕೆಗಳಲ್ಲಾಗಲಿ, ವಿರಾಮದ ಸಮಯದಲ್ಲಾಗಲಿ, ರಾತ್ರಿ ಹೊತ್ತಿನಲ್ಲಾಗಲಿ ನಮಾಝುಗಳನ್ನು ನಿರ್ವಹಿಸಿರಿ. ಓ ಅಲ್ಲಾಹನೇ ನಾವು ಈ ಜಲ್ಸದಲ್ಲಿ ಭಾಗ ವಹಿಸುತ್ತಿದ್ದೇವೆ, ಏಕೆಂದರೆ ನಿನ್ನ ಸಾನಿಧ್ಯ ನಮಗೆ ದೊರೆಯುವಂತಾಗಲಿ. ನಮಗೆ ಈ ಜಲ್ಸಕ್ಕೆ ಸಂಬಂಧಿಸಿದ ಎಲ್ಲಾ ಅನುಗ್ರಹಗಳನ್ನು ದಯಪಾಲಿಸು ಮತ್ತು ನಮ್ಮಲ್ಲಿ ನೀನು ಬಯಸುವಂತೆ ಪರಿವರ್ತನೆಯನ್ನು ಉಂಟುಮಾಡು. ಆ ಕಾರಣದಿಂದಾಗಿಯೇ ನೀನು ಹಝ್ರ‌ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸತ್ಯಸಂದನಾದ ಗುಲಾಮನನ್ನು ಈ ಲೋಕಕ್ಕೆ ಕಳುಹಿಸಿದೆ. ಅವರಿಗೆ ನಾನು ಮನಃ ಪೂರ್ವಕವಾಗಿ ಸ್ವೀಕರಿಸುವಂತೆ ಮಾಡು.

ಕೊನೆಯಲ್ಲಿ ಈ ಮಾತನ್ನು ನೆನಪಿಡಿರಿ. ಪ್ರತಿಯೊಬ್ಬ ಅಹ್ಮದಿಯ ಮುಖವಾಡದ ಹಿಂದೆ ಅಹ್ಮದಿಯ್ಯತ್‌ನ ಮುಖವಾಡವಿದೆ. ಹಝ್ರ‌ರತ್ ಮಸೀಹ್ ಮೌಊದ್(ಅ) ಮತ್ತು ಇಸ್ಲಾಮಿನ ಮುಖವಾಡವಿದೆ. ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯ ಈ ಎಲ್ಲಾ ವಿಷಯಗಳನ್ನು ಗಮನದಲ್ಲಿಡ ಬೇಕು ಮತ್ತು ಅದರ ರಕ್ಷಣೆ ಮಾಡಬೇಕು.

ಅಲ್ಲಾಹನು ನಿಮಗೆ ಹಝ್ರ‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಶಿಕ್ಷಣವನ್ನು ಪಾಲಿಸುವ ಭಾಗ್ಯ ದಯಪಾಲಿಸಲಿ ಮತ್ತು ಅಲ್ಲಾಹನ ಅನುಗ್ರಹದಿಂದ ನಿಮ್ಮ ಜಲ್ಸ ಸಾಲಾನ ಯಶಸ್ವಿಯಾಗಲಿ ಹಾಗೂ ನಿಮ್ಮೆಲ್ಲರಿಗೂ ಬೈತ್ತಿನ ಶರತ್ತುಗಳನ್ನು ಪಾಲಿಸುವಂತೆ ಕರುಣಿಸಲಿ.

ಅಲ್ಲಾಹನು ನಿಮಗೆಲ್ಲರಿಗೂ ಅಹ್ಮದಿಯಾ ಖಿಲಾಫತ್‌ನೊಂದಿಗೆ ನಿಷ್ಠೆಯನ್ನು ತೋರಿಸುವಂತೆ ಹಾಗೂ ಅಲ್ಲಾಹನು ನಿಮ್ಮ ಜೀವನದಲ್ಲಿ ಪರಿಶುದ್ಧತೆಯನ್ನು ಪಡೆಯುವಂತೆ ಹಾಗೂ ಸತ್ಕರ್ಮಗಳಲ್ಲಿ, ಸತ್ಪತದಲ್ಲಿ, ಇಸ್ಲಾಮ್ ಮತ್ತು ಮಾನವೀಯತೆಯ ಸೇವೆಯಲ್ಲಿ ಮುನ್ನಡೆಯುವಂತೆ ಮಾಡಲಿ. ಅಲ್ಲಾಹನ ಅನುಗ್ರಹಗಳು ನಿಮ್ಮೆಲ್ಲರ ಮೇಲೆ ಇರಲಿ.

ವಸ್ಸಲಾಮ್

ಮಿರ್ಝಾ ಮಸ್‌ರೂರ್ ಅಹ್ಮದ್

**ಖಲೀಫತುಲ್ ಮಸೀಹ್ ಖಾಮಿಸ್**

# ಜುಮುಅ ಖುತ್‌ಬ

**ಇಸ್ಲಾಮಿನಲ್ಲಿ ಅಲ್ಲಾಹನೊಂದಿಗೆ ಸಹಭಾಗಿತ್ವಗೊಳಿಸುವುದು ಮತ್ತು ಪೋಷಕರ ಹಕ್ಕುಗಳನ್ನು ವಜಗೊಳಿಸುವುದರ ನಂತರ ಸುಳ್ಳು ಹೇಳುವುದು ಬಹು ದೊಡ್ಡ ಪಾಪವಾಗಿದೆ.... ಈಮಾನ್ ಹಾಗೂ ಹೇಡಿತನವು ಒಂದು ಕಡೆ ಸೇರಬಹುದು ಆದರೆ ಈಮಾನ್ ಮತ್ತು ಸುಳ್ಳು ಒಂದು ಕಡೆ ಸೇರಲು ಸಾಧ್ಯ ಇಲ್ಲ..... ಯಾರು ವಿದ್ರೋಹ ಮಾಡುತ್ತಾನೋ ಆತನು ಪ್ರಳಯದ ದಿವಸ ಅಲ್ಲಾಹನ ಕೋಪಕ್ಕೀಡಾಗುವನು.**

**ನಿಷ್ಠೆ ಮತ್ತು ಆತ್ಮೀಯತೆಯ ಮೂರ್ತಿರೂಪರಾಗಿದ್ದ ಬದರಿ ಸಹಾಬಿಯಾದ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ರಝಿಯಲ್ಲಾಹು ಅನ್ಹುರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಪ್ರತಿಜ್ಞಾ ಭಂಗ, ವಿದ್ರೋಹ, ಯುದ್ಧ ಮಾಡಲು ಪ್ರೋತ್ಸಾಹ, ಹಿಂಸಾಚಾರ, ಅಶ್ಲೀಲ ಹೇಳಿಕೆ, ಕೊಲೆ ಯತ್ನ ಮೊದಲಾದ ದೋಷಾರೋಪಗಳಲ್ಲಿ ಮುಳುಗಿದ್ದ ಕಅಬ್ ಬಿನ್ ಅಶ್ರಫನನ್ನು ಅವನ ಕುಕೃತ್ಯಗಳ ಕಾರಣದಿಂದ ವಧಾರ್ಹನೆಂದು ಶಿಕ್ಷೆ ವಿಧಿಸಿದ ಪ್ರಸ್ತಾವನೆ**

---

**ಹದೀಸ್ 'ಅಲ್ ಹರ್‌ಬು ಖುದ್‌ಅತುನ್'ನ ಉತ್ತಮ ವ್ಯಾಖ್ಯಾನ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07-02-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِينَ ۔ اَلرَّحْمٰنِ الرَّحِيمِ ۔ مٰلِكِ يَوْمِ الدِّينِ ۔

اِيَّاكَ نَعْبُدُ وَاِيَّاكَ نَسْتَعِينُ ۔ اِهْدِنَا الصِّرَاطَ الْمُسْتَقِيمَ ۔

صِرَاطَ الَّذِينَ اَنْعَمْتَ عَلَيْهِمْ غَيْرِ الْمَغْضُوبِ عَلَيْهِمْ وَلَا الضَّآلِّينَ ۔

ಇಂದು ನಾನು ವಿವರಿಸಲಿರುವ ಬದರಿ ಸಹಾಬಿಯ ಹೆಸರು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ(ರ). ಅವರ ತಂದೆಯ ಹೆಸರು ಮುಸಲ್ಲಿಮ ಬಿನ್ ಸಲ್‌ಮ ಎಂದಾಗಿತ್ತು. ಅವರ ಅಜ್ಜನ ಹೆಸರು ಸಲ್‌ಮ ಎಂದಾಗಿತ್ತು ಅದಲ್ಲದೆ ಅವರನ್ನು ಖಾಲಿದ್ ಎಂದು ಸಹ ಕರೆಯುತ್ತಿದ್ದರು. ಅವರ ತಾಯಿಯ ಉಮ್ಮೆ ಸಹಮ್ ಅವರ ಹೆಸರು ಖಾಲಿದಹ್ ಬಿನ್ತ್ ಅಬು ಉಬೈದ ಎಂದಾಗಿತ್ತು. ಅವರು ಅನ್‌ಸಾರ್‌ಗಳ ಔಸ್ ಗೋತ್ರದವರಾಗಿದ್ದರು ಮತ್ತು ಅಬ್ದ್ ಅಶ್‌ಹಲ್‌ನ ಪ್ರತಿಜ್ಞಾ ಬದ್ಧರಾಗಿದ್ದರು. ಹಝ್ರತ್ ಮುಹಮ್ಮದ್ ಬಿನ್ ಮುಸಲ್ಲಿಮ(ರ) ಅವರ ಉಪನಾಮ ಅಬು ಅಬ್ದುಲ್ಲಾ ಅಥವಾ ಅಬೂ ಅಬ್ದುರ್ರಹ್ಮಾನ್ ಮತ್ತು ಅಬೂ ಸಯೀದ್ ಎಂದು ಸಹ ಹೇಳಲಾಗುತ್ತದೆ. ಅಲ್ಲಾಮ ಇಬ್ನೆ ಹಜರ್ ಅವರ ಪ್ರಕಾರ ಅಬೂ ಅಬ್ದುಲ್ಲಾ ಎಂಬುದು ಸರಿಯಾಗಿತ್ತು. ಒಂದು ವರದಿಯ ಪ್ರಕಾರ ಅವರು ನುಬುವ್ವತ್ತಿನ 22 ವರ್ಷಗಳ ಮುಂಚೆ ಜನಿಸಿದರು ಮತ್ತು ಅವರು ಅಜ್ಞಾನ ಕಾಲದಲ್ಲಿ 'ಮುಹಮ್ಮದ್' ಎಂದು ಹೆಸರಿಟ್ಟವರಲ್ಲಿ ಸೇರಿದ್ದರು. (ಅತ್ತಬಖಾತುಲ್ ಕುಬ್ರ, ಸಂಪುಟ-3, ಪುಟ-338 ಮುಹಮ್ಮದ್ ಬಿನ್ ಮುಸ್ಲಿಮ, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990, ಅಲ್‌ಅಸಾಬ ಸಂಪುಟ-6, ಪುಟ-28, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ 1995, ಉಸದುಲ್ ಗಾಬ ಸಂಪುಟ-5, ಪುಟ-106, ಮುಹಮ್ಮದ್ ಬಿನ್ ಮುಸ್ಲಿಮ, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ 2003)

ಮದೀನದ ಯಹೂದಿಯರು ಹಝ್ರತ್ ಮುಸಾ(ಅ) ನೀಡಿದ ಪ್ರವಾದಿಯ ಭವಿಷ್ಯವಾಣಿಯ ಪ್ರಕಾರ ಆ ಪ್ರವಾದಿಯ ಆಗಮನದ ನಿರೀಕ್ಷೆಯಲ್ಲಿದ್ದರು. ಅವರು ಹೇಳಿದರು ಅವತೀರ್ಣಗೊಳ್ಳಲಿರುವ ಪ್ರವಾದಿಯ ಹೆಸರು ಮುಹಮ್ಮದ್ ಎಂದಾಗುವುದು. ಅರಬ್ ಜನರನ್ನು ಇದರ ಬಗ್ಗೆ ತಿಳಿದು ಬಂದಾಗ ಅವರೆಲ್ಲರು ತಮ್ಮ ಮಕ್ಕಳ ಹೆಸರು ಮುಹಮ್ಮದ್ ಎಂದು ಹೆಸರಿಡಲು ಪ್ರಾರಂಭಿಸಿದರು. ಪ್ರವಾದಿ ಮುಹಮ್ಮದ್(ಸ) ಅವರ ಜೀವನ ಚರಿತ್ರೆಗಳ ಗ್ರಂಥಗಳಲ್ಲಿ ಅಜ್ಞಾನ ಕಾಲದ ಶಕುನ ಪ್ರಕಾರ ಮುಹಮ್ಮದ್ ಎಂದು ಹೆಸರಿಸಿರುವವರ ಸಂಖ್ಯೆ ಮೂರರಿಂದ ಹದಿನೈದರವರೆಗೆ ಇತ್ತು ಎಂದು ಹೇಳಲಾಗುತ್ತದೆ. ಅಲ್ಲಾಮ ಸುಹೈಲಿ ಎಂಬ ಸೀರತ್ ಇಬ್ನೆ ಹಿಶ್ಯಾಮಿನ ವ್ಯಾಖ್ಯಾನಗಾರರಾಗಿದ್ದಾರೆ ಅವರು ಮೂರು ಜನರ ಹೆಸರೂ ಮುಹಮ್ಮದ್ ಎಂದಾಗಿತ್ತು ಎಂದು ಬರೆದಿದ್ದಾರೆ. ಅಲ್ಲಾಮ ಇಬ್ನೆ ಅಸೀರ್ ಎಂಬವರು ಆರು ಜನರ ಹೆಸರುಗಳನ್ನು ಬರೆದಿದ್ದಾರೆ. ಅಬ್ದುಲ್ ವಹಾಬ್ ಶೆಅ್‌ರಾನಿರವರು ಹದಿನಾಲ್ಕು ಜನರು ಎಂದು ನಮೂದಿಸಿದ್ದಾರೆ. ತಿಳಿವಳಿಕೆಯ ದೃಷ್ಟಿಯಿಂದ ಕೆಲವು ಹೆಸರುಗಳನ್ನು ಇಲ್ಲಿ ಹೇಳುತ್ತೇನೆ. ಅವರಲ್ಲಿ ಮುಹಮ್ಮದ್ ಬಿನ್ ಸುಫಿಯಾನ್, ಮುಹಮ್ಮದ್ ಬಿನ್ ಉಹೈಹ, ಮುಹಮ್ಮದ್ ಬಿನ್ ಹುಮ್‌ರಾನ್, ಮುಹಮ್ಮದ್ ಬಿನ್ ಖುಝಾಯಿ, ಮುಹಮ್ಮದ್ ಬಿನ್ ಅದಿ, ಮುಹಮ್ಮದ್ ಬಿನ್ ಉಸಾಮ, ಮುಹಮ್ಮದ್ ಬಿನ್ ಬರಾ, ಮುಹಮ್ಮದ್ ಬಿನ್ ಹಾರಿಸ್, ಮುಹಮ್ಮದ್ ಬಿನ್ ಹಿರ್‌ಮಾಝ್, ಮುಹಮ್ಮದ್ ಬಿನ್ ಖವ್ಲಿ, ಮುಹಮ್ಮದ್ ಬಿನ್ ಯಹ್ಮದಿ, ಮುಹಮ್ಮದ್ ಬಿನ್ ಝ್ಯೈದ್, ಮುಹಮ್ಮದ್ ಬಿನ್ ಉಸ್ಯೆದಿ, ಮುಹಮ್ಮದ್ ಬಿನ್ ಫಖೀಮಿ ಮತ್ತು ಮುಹಮ್ಮದ್ ಬಿನ್ ಮುಸ್ಲಿಮ ಇದ್ದರು. (ಮುಹಮ್ಮದ್ ರಸೂಲುಲ್ಲಾಹ್ ವಝ್ಝುನ್ ಮಅಹು, ಅಬ್ದುಲ್ ಹಮೀದ್ ಜೋದಾ ಅಸ್ಸಹಾರ್ ಸಂಪುಟ-2, ಪುಟ-111-112, ಮಕ್‌ತಬ ಮಿಸರ್, ರೋಝುಲ್ ಉನುಫ್ ಶರಹ್ ಇಬ್ನೆ ಹಿಶ್ಯಾಮ್, ಅಲ್ಲಾಮ ಸಹೇಲಿ ಸಂಪುಟ-1, ಪುಟ-280, ದಾರುಲ್ ಕುತುಬ್ ಇಲ್‌ಮಿಯ ಬೈರೂತ್, ಉಸದುಲ್ ಗಾಬ ಲಿಇಬ್ನೆ ಅಸೀರ್ ಸಂಪುಟ-5, ಪುಟ-72, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ 2003, ಕಶಫುಲ್ ಗಮ್ಮ ಅನ್ ಜಮೀಉಲ್ ಉಮ್ಮ ಲಿಶ್ಯುರಾನಿ ಭಾಗ-1, ಪುಟ-283-284, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ 1998, ಅಲ್‌ಅಸಾಬ ಸಂಪುಟ-6, ಪುಟ-28, ಮುಹಮ್ಮದ್ ಬಿನ್ ಮುಸ್ಲಿಮ ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ(ರ) ಅವರು ಆದ್ಯ ಕಾಲದಲ್ಲಿ ಮುಸ್ಲಿಮರಾದವರಾಗಿದ್ದರು. ಅವರು ಹಝ್ರತ್ ಮುಸ್‌ಇಬ್ ಬಿನ್ ಉಮ್ಮೈರರ ಕೈಯ್ಯಲ್ಲಿ ಹಝ್ರತ್ ಸಅದ್ ಬಿನ್ ಮುಆದ್‌ರಿಗಿಂತ ಮೊದಲು ಮುಸ್ಲಿಮರಾದರು. ಹಝ್ರತ್ ಉಬೈದ ಬಿನ್ ಅಲ್ ಜರಾಹ್ ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಮತ್ತು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದರು. ಕಅಬ್ ಬಿನ್ ಅಶ್ರಫ್ ಮತ್ತು ಅಬೂ ರಾಫಿಅ್ ಸಲಾಮ್ ಬಿನ್ ಅಬೂ ಹಖೀಖ್ ಎಂಬಿಬ್ಬರನ್ನು ಹತ್ಯೆ ಮಾಡಲು ನೇಮಿಸಲ್ಪಟ್ಟವರಲ್ಲಿ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಸೇರಿದ್ದರು. ಹತರಾದ ಆ ಇಬ್ಬರು ಸಹ ಕಲಹಗಾರರಾದ ದುಷ್ಕರ್ಮಿಗಳಾಗಿದ್ದರು. ಅವರಿಬ್ಬರು ಯಾವಾಗಲೂ ಮುಸ್ಲಿಮರಿಗೆ ಹಾನಿಯುಂಟುಮಾಡಲು ನಿರತರಾಗಿರುತ್ತಿದ್ದರು. ಅವರು ಅನ್ಯರನ್ನೂ ಮುಸ್ಲಿಮರ ಮೇಲೆ ಆಕ್ರಮಣ ಮಾಡಿಸಲು ಪ್ರೇರೇಪಿಸುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸಹ ಆಕ್ರಮಿಸಲು ಪ್ರಯತ್ನಿಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರನ್ನು ಆ ದುಷ್ಕರ್ಮಿಗಳ ಹತ್ಯೆ ಮಾಡಲು ನೇಮಿಸಿದ್ದರು. ಕೆಲವು ಯುದ್ಧಗಳಿಗೆ ಹೋಗುವ ಸಂದರ್ಭದಲ್ಲಿ

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ಮದೀನದ ಮೇಲ್ವಿಚಾರಕರನ್ನಾಗಿ ನೇಮಿಸಿದ್ದರು.

ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರ ಪುತ್ರರಾದ ಜಅಫರ್, ಅಬ್ದುಲ್ಲಾ, ಸಅದ್, ಅಬ್ದುರ್ರಹ್ಮಾನ್ ಮತ್ತು ಉಮರ್ ಸಹ ಪ್ರವಾದಿವರ್ಯರ ಸಹಾಬಿಗಳಲ್ಲಿ ಸೇರುತ್ತಾರೆ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರು ತಬೂಕ್ ಯುದ್ಧದ ಹೊರತು ಇತರ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅನುಮತಿ ಪಡೆದು ಅವರು ತಬೂಕ್ ಯುದ್ಧದಲ್ಲಿ ಭಾಗವಹಿಸದೆ ಮದೀನದಲ್ಲಿಯೇ ಇದ್ದರು. (ಅಲ್ಅಸಾಬ ಫೀ ತಮೀಝಿಸ್ಸಹಾಬ ಸಂಪುಟ–6, ಪುಟ–28,29, ಮುಹಮ್ಮದ್ ಬಿನ್ ಮುಸ್ಲಿಮ, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್ 1995, ಶರಹ್ ಝುರ್‌ಖಾನಿ ಸಂಪುಟ–2, ಪುಟ–511, ದಾರುಲ್‌ಕುತುಬ್ ಇಲ್‌ಮಿಯಾ ಬೈರೂತ್ 1996)

ಇಸ್ಲಾಮಿನ ಶತ್ರುಗಳಾದ, ಮೇಲೆ ಹೇಳಿದ ಇಬ್ಬರು ದುಷ್ಕರ್ಮಿಗಳ ಹತ್ಯೆಯಲ್ಲಿ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಸೇರಿದ್ದರು. ಹಝ್ರತ್ ಉಬಾದ ಬಿನ್ ಬಶರ್‌ರ ಬಗ್ಗೆ ವಿವರಿಸುವಾಗ ಅದರ ಬಗ್ಗೆ ಸಹ ನಾನು ಪ್ರಸ್ತಾಪಿಸಿದ್ದೆನು. ಸ್ವಲ್ಪ ಹೆಚ್ಚಿಗೆ ವಿವರಣೆ ಸಂಕ್ಷಿಪ್ತವಾಗಿ ಈಗ ನೀಡುವೆನು. ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಕಅಬ್ ಬಿನ್ ಅಶ್ರಫ್‌ನ ಹತ್ಯೆಗೆ ಸಂಬಂಧಿಸಿ ಹೀಗೆ ಬರೆದಿದ್ದಾರೆ: ಬದರ್ ಯುದ್ಧವು ಮದೀನದ ಯಹೂದಿಯರ ಹೃದಯದಲ್ಲಿದ್ದ ಹಗೆತನದ ಬಗ್ಗೆ ಬೆಳಕು ಬೀರಿತು. ಅವರ ಹಗೆತನ ಮತ್ತೂ ವರ್ಧಿಸಿತು. ಕಅಬ್ ಬಿನ್ ಅಶ್ರಫ್‌ನ ಹತ್ಯೆ ಅದರದೇ ಒಂದು ಕೊಂಡಿಯಾಗಿತ್ತು. ಕಅಬ್ ಯಹೂದಿ ಧರ್ಮವನ್ನು ಅವಲಂಭಿಸಿದ್ದರೂ ಅವನು ಯಹೂದಿ ವಂಶದವನಾಗಿರಲಿಲ್ಲ. ಅರಬಿಯಾಗಿದ್ದನು. ಅವನ ಪಿತನಾಗಿದ್ದ ಕಅಬ್ ಬನೂ ನಹ್‌ಯಾನ್‌ನ ಒಬ್ಬ ಚತುರ, ಚಾಣಾಕ್ಷ ಮನುಷ್ಯನಾಗಿದ್ದನು. ಅವನು ಮದೀನಕ್ಕೆ ಆಗಮಿಸಿ ಯಹೂದಿಯರ ಬನೂ ನಝೀರ್ ಗೋತ್ರದವರೊಂದಿಗೆ ಪ್ರತಿಜ್ಞಾಬದ್ಧನಾದನು. ಅವನು ಎಷ್ಟು ಅಧಿಕಾರ ಮತ್ತು ಪ್ರಭಾವ ಗಳಿಸಿದನೆಂದರೆ ಬನೂ ನಝೀರ್ ಗೋತ್ರದ ಸರ್ವೋನ್ನತ ಮುಖಂಡನಾದ ಅಬೂ ರಾಫಿಅ್ ಬಿನ್ ಅಬಿಲ್ ಹಖೀಖ್ ತನ್ನ ಪುತ್ರಿಯನ್ನು ಅವನಿಗೆ ವಿವಾಹ ಮಾಡಿ ಕೊಟ್ಟನು. ಈ ದಂಪತಿಗಳಿಗೆ ಕಅಬ್ ಜನಸಿದನು. ಕಅಬ್ ದೊಡ್ಡವನಾದ ನಂತರ ತನ್ನ ಪಿತನಗಿಂತಲೂ ಹೆಚ್ಚಿನ ಸ್ಥಾನ ಗಳಿಸಿದನು. ಅವನನ್ನು ಅರಬ್ ದೇಶದ ಎಲ್ಲಾ ಯಹೂದಿಯರು ತಮ್ಮ ನಾಯಕನಾಗಿ ಗೌರವಿಸ ತೊಡಗಿದರು. ನೈತಿಕವಾಗಿ ಅವನು ಅತ್ಯಂತ ಕೊಳಕು ಸ್ವಭಾವ ಹೊಂದಿದವನಾಗಿದ್ದನು, ಗೂಢ ತಂತ್ರಗಳನ್ನು ರೂಪಿಸುವುದರಲ್ಲಿ ಮತ್ತು ವಿಧ್ವಂಸಕ ಕೃತ್ಯಗಳಲ್ಲಿ ಬಹಳ ನೈಪುಣ್ಯ ಗಳಿಸಿದ್ದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮದೀನಕ್ಕೆ ಹಿಜ್‌ರತ್ ಮಾಡಿ ಆಗಮಿಸಿದಾಗ ಕಅಬ್ ಬಿನ್ ಅಶ್ರಫ್ ಇತರ ಯಹೂದಿಯರೊಂದಿಗೆ ಸೇರಿ ಗೂಢಾಲೋಚನೆ ನಡೆಸುತ್ತಿದ್ದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮತ್ತು ಯಹೂದಿಯರ ಮಧ್ಯೆ ಪರಸ್ಪರ ಸ್ನೇಹ, ಶಾಂತಿ, ಸಂರಕ್ಷಣೆ ಮತ್ತು ಪ್ರತಿರೋಧಕ್ಕೆ ಸಂಬಂಧಿಸಿ ಸಹಭಾಗಿತ್ವದ ಬಗ್ಗೆ ಲಿಖಿತ ಒಪ್ಪಂದ ಮಾಡಲಾಗಿತ್ತು. ಆದರೆ ಕಅಬನ ಹೃದಯದೊಳಗೆ ದ್ವೇಷ ಮತ್ತು ಹಗೆತನದ ಅಗ್ನಿ ಪ್ರಜ್ವಲಿಸಲು ತೊಡಗಿತ್ತು. ಅವನು ರಹಸ್ಯ ತಂತ್ರಗಳ ಮತ್ತು ರಹಸ್ಯ ಒಕ್ಕೂಟಗಳ ಮೂಲಕ ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರ ವಿರುದ್ಧ ವರ್ತಿಸಲು ಪ್ರಾರಂಭಿಸಿದನು. ಬದರ್ ಯುದ್ಧದ ನಂತರ ಅವನ ಹಗೆತನ ಮತ್ತಷ್ಟು ವರ್ಧಿಸಿತು. ಅವನ ವರ್ತನೆ ಅತ್ಯಂತ ಕೆಡುಕುಂಟು ಮಾಡುವಂತಹದು ಮತ್ತು ಅದರಿಂದ ಮುಸ್ಲಿಮರಿಗೆ ಅತ್ಯಂತ ಅಪಾಯಕರ ಸ್ಥಿತಿ ತಲೆದೋರಿತ್ತು.

ಬದರ್ ಯುದ್ಧದಲ್ಲಿ ಮುಸ್ಲಿಮರಿಗೆ ಅಸಾಧಾರಣವಾದ ಜಯ ಲಭಿಸಿದಾಗ ಮತ್ತು ಖುರೈಶಿಗಳ ಮುಖಂಡರಲ್ಲಿ ಬಹುತೇಕ ಜನರು ಮರಣಹೊಂದಿದಾಗ, ಈ ಹೊಸ ಧರ್ಮ ತಾನಾಗಿ ನಾಶವಾಗುವುದಾಗಿ ಕಾಣುವುದಿಲ್ಲ ಎಂದು ಆತನಗೆ ಮನವರಿಕೆಯಾಯಿತು. ಬದರ್ ಯುದ್ಧದ ನಂತರ ಕಅಬ್ ತನ್ನ ಸಂಪೂರ್ಣ ಪ್ರಯತ್ನವನ್ನು ಇಸ್ಲಾಮಿನ ನಾಶಕ್ಕಾಗಿ ವಿನಿಯೋಗಿಸಲು ನಿರ್ಧರಿಸಿದನು.

ಬದರ್ ಯುದ್ಧದಲ್ಲಿ ಗಳಿಸಿದ ಜಯ ಇಸ್ಲಾಮ್ ಧರ್ಮಕ್ಕೆ ತನ್ನ ಊಹೆಗೆ ಅತೀತವಾದ ಶಕ್ತಿಯನ್ನು ನೀಡಿದೆ ಎಂದು ಕಅಬ್‌ನಿಗೆ ದೃಢವಾಗಿ ಮನವರಿಕೆಯಾಯಿತು. ಅವನು ಕೂಡಲೇ ಮಕ್ಕದ ಕಡೆಗೆ ಪ್ರಯಾಣಿಸಿದನು. ಅವನು ಮಕ್ಕದಲ್ಲಿ ತನ್ನ ವಾಕ್ಚಾತುರ್ಯದಿಂದ ಮತ್ತು ಕವಿತೆಗಳನ್ನು ಹಾಡುವ ಮೂಲಕ ಖುರೈಶಿಗಳ ಹೃದಯಗಳಲ್ಲಿ ಉರಿಯುತ್ತಿದ್ದ ಅಗ್ನಿಯನ್ನು ಇನ್ನಷ್ಟು ಪ್ರಜ್ವಲಿಸಿದನು. ಅವರ ಹೃದಯಗಳಲ್ಲಿ ಮುಸ್ಲಿಮರ ರಕ್ತವನ್ನು ಹೀರುವ ನಿವಾರಿಸಲಾಗದ ದಾಹವನ್ನು ಸೃಷ್ಟಿಸಿದನು. ಅವರ ಎದೆಯಲ್ಲಿ ಪ್ರತೀಕಾರ ಮಾಡುವ ಮತ್ತು ಹಗೆತನದ ಭಾವನೆಗಳನ್ನು ತುಂಬಿಸಿದನು. ಕಅಬನ ಉತ್ತೇಜಕ ಮಾತುಗಳಿಂದ ಅವರ ಭಾವನೆಗಳಲ್ಲಿ ಅತ್ಯುನ್ನತ ಮಟ್ಟದ ಮಿಂಚು ಉದ್ಭವಿಸಿತು. ಕಅಬನು ಅವರನ್ನು ಕಅಬದ ಅಂಗಳಕ್ಕೆ ಕರೆದುಕೊಂಡು ಹೋಗಿ ಕಅಬಕ್ಕೆ ಹೊದಿಸಿದ ಪರದೆಯನ್ನು ಅವರ ಕೈಯಲ್ಲಿ ಕೊಟ್ಟು ಅವರು ಹೀಗೆ ಆಣೆ ಹಾಕಿಸುವಂತೆ ಮಾಡಿದನು: ಇಸ್ಲಾಮ್ ಮತ್ತು ಇಸ್ಲಾಮಿನ ಸ್ಥಾಪಕರನ್ನು ಲೋಕದಿಂದ ನಾಶಮಾಡುವ ತನಕ ನಾವು ವಿಶ್ರಾಂತಿ ಪಡೆಯಲಾರೆವು ಎಂದು.

ಅನಂತರ ಆ ದುಷ್ಟನು ಅರಬ್ ದೇಶದ ಇತರ ಗೋತ್ರಗಳ ಕಡೆಗೆ ಒಂದರ ನಂತರ ಇನ್ನೊಂದರಂತೆ ಹೋದನು. ಅಲ್ಲಿ ಸುತ್ತಾಡಿ ಮುಸ್ಲಿಮರ ವಿರುದ್ಧ ಜನರನ್ನು ಉತ್ತೇಜಿಸಿದನು. ಅನಂತರ ಮದೀನಕ್ಕೆ ಮರಳಿ ಬಂದು ಮುಸ್ಲಿಮ್ ಮಹಿಳೆಯರ ವಿರುದ್ಧ ಅಶ್ಲೀಲ ಹಾಡುಗಳನ್ನು ಹಾಡಿದನು. ಉದ್ರೇಕಿಸುವ ತಶ್‌ಬೀಬ್ ಎಂಬ ಆ ಹಾಡುಗಳಲ್ಲಿ ಮುಸ್ಲಿಮ್ ಮಹಿಳೆಯರನ್ನು ಅತ್ಯಂತ ಕೊಳಕು ಅಶ್ಲೀಲ ರೀತಿಯಲ್ಲಿ ವರ್ಣಿಸಿದನು. ಅವನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕುಟುಂಬದ ಮಹಿಳೆಯರನ್ನು ಸಹ ಅಶ್ಲೀಲ ಹಾಡುಗಳಿಗೆ ಗುರಿಪಡಿಸದೆ ಬಿಡಲಿಲ್ಲ. ದೇಶದಲ್ಲಿ ಆ ಪದ್ಯಗಳ ಬಗ್ಗೆ ಜನರು ಚರ್ಚಿಸುವಂತೆ ಮಾಡಿದನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ವಧಿಸಲು ಸಹ ಅವನು ಗೂಢಾಲೋಚನೆ ಮಾಡಿದ್ದನು. ಒಂದು ಸತ್ಕಾರದ ನೆಪದಲ್ಲಿ ತನ್ನ ಮನೆಗೆ ಕರೆದು ಕೆಲವು ಯುವ ಯಹೂದಿಯರಿಂದ ಅವರನ್ನು ಹತ್ಯೆ ಮಾಡಿಸಲು ನಿರ್ಧರಿಸಿದ್ದನು. ಆದರೆ ಅಲ್ಲಾಹನ ಅನುಗ್ರಹದಿಂದ ತಕ್ಕ ಸಮಯದಲ್ಲಿ ಅದರ ಬಗ್ಗೆ ಸಮಾಚಾರ ಲಭಿಸಿದ ಕಾರಣ ಅವನ ಗೂಢತಂತ್ರ ಫಲಕಾರಿಯಾಗಲಿಲ್ಲ.

ಕಅಬನ ವಿರುದ್ಧ ಪ್ರತಿಜ್ಞಾ ಭಂಗ, ವಿದ್ರೋಹ, ಯುದ್ಧ ಮಾಡಲು ಪ್ರೋತ್ಸಾಹ, ಹಿಂಸಾಚಾರ, ಅಶ್ಲೀಲ ಹೇಳಿಕೆ, ಕೊಲೆ ಯತ್ನ ಮೊದಲಾದ ದೋಷಾರೋಪಗಳು ಸಾಬೀತಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಅಬ್ ಬಿನ್ ಅಶ್ರಫನು ಅವನ ಕುಕೃತ್ಯಗಳ ಕಾರಣದಿಂದ ವಧಾರ್ಹನೆಂದು ವಿಧಿಸಿದರು. ಕಅಬನ ಕುಕೃತ್ಯಗಳ ಕಾರಣ ಮದೀನದಲ್ಲಿ ಎಂತಹ ಪರಿಸ್ಥಿತಿ ತಲೆದೋರಿತ್ತೆಂದರೆ ಅವನ ವಿರುದ್ಧ ಬಹಿರಂಗವಾಗಿ ವಧಾರ್ಹನೆಂದು ಪ್ರಕಟಿಸಿ ಅವನನ್ನು ವಧಿಸಿದರೆ ಮದೀನದಲ್ಲಿ ಅಪಾಯಕರವಾದ ಅಂತಃಕಲಹ ಪ್ರಾರಂಭವಾಗುವ ಭಯವಿದ್ದಿತು. ಆ ಅಂತಃಕಲಹದಲ್ಲಿ ಬಹಳ ರಕ್ತಪಾತವಾಗುತ್ತಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೋಮುಗಳ ಮಧ್ಯೆ ರಕ್ತಪಾತವಾಗುವುದನ್ನು ತಡೆಯಲು ಪ್ರತಿಯೊಂದು ರೀತಿಯಲ್ಲಿ ಪ್ರಯತ್ನಿಸಲು ಬಯಸಿದ್ದರು. ಆದುದರಿಂದ ಕಅಬನನ್ನು ಬಹಿರಂಗವಾಗಿ ಕೊಲ್ಲಬಾರದು ಎಂದು ಅವರು ಮಾರ್ಗದರ್ಶನ ನೀಡಿದರು. ಕೆಲವು ಜನರೊಂದಿಗೆ ರಹಸ್ಯವಾಗಿ ಅವನನ್ನು ಹತ್ಯೆ ಮಾಡಲು ನಿರ್ದೇಶಿಸಿದರು. ಔಸ್ ಗೋತ್ರದ ನಿಷ್ಠಾವಂತ ಸಹಾಬಿ ಮುಹಮ್ಮದ್ ಬಿನ್ ಮುಸ್ಲಿಮನಿಗೆ ಈ ಕೆಲಸ ವಹಿಸಿಕೊಟ್ಟರು. ಹತ್ಯೆಯ ರೀತಿಯ ಬಗ್ಗೆ ಔಸ್ ಗೋತ್ರದ ನಾಯಕ ಸಅದ್ ಬಿನ್ ಮುಆಝಿರಿಂದ ಸಲಹೆ ಪಡೆಯಲು ಹೇಳಿದರು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹೇಳಿದರು: ಯಾ ರಸೂಲುಲ್ಲಾಹ್, ರಹಸ್ಯವಾಗಿ ಹತ್ಯೆ ಮಾಡಲು ಏನಾದರೂ ಉಪಾಯ ಮಾಡಿ ಅವನನ್ನು ಮನೆಯಿಂದ ಹೊರಗೆ ಬರುವಂತೆ ಮಾಡಬೇಕಾಗುತ್ತದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದಕ್ಕೆ ಒಪ್ಪಿಗೆ ನೀಡಿದರು. ಹಾಗೆ ಹಝ್ರತ್ ಸಅದ್ ಬಿನ್ ಮುಆಝಿರಿಂದ ಸಲಹೆ ಪಡೆದು ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರು ತನ್ನೊಂದಿಗೆ ಅಬೂ ನಾಯಿಲ ಮತ್ತು ಇತರ ಎರಡು ಮೂರು ಸಹಾಬರನ್ನು ಕರೆದುಕೊಂಡು ಕಅಬನ ಮನೆಗೆ ಹೋದರು. ಕಅಬನನ್ನು ಅವನ ಮನೆಯೊಳಗಿನಿಂದ ಕರೆದು ಹೇಳಿದರು: ನಮ್ಮ ಯಜಮಾನರಾದ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಮ್ಮಿಂದ ಸದಖವಾಗಿ ಹಣ ಕೇಳುತ್ತಿದ್ದಾರೆ. ಆದರೆ ನಾವು ಬರಿಗೈಯಲ್ಲಿದ್ದೇವೆ. ನೀವು ನಮಗೆ ಉಪಕಾರ ಮಾಡಿ ಸ್ವಲ್ಪ ಹಣ ಸಾಲವಾಗಿ ಕೊಡುವಿರೋ? ಈ ಮಾತು ಆಲಿಸಿ ಕಅಬ್ ಸಂತೋಷದಿಂದ ನೆಗೆದನು. ಅವನು ಹೇಳಿದನು: ಅಲ್ಲಾಹನಾಣೆ ನೀವು ಅವನ ಬಗ್ಗೆ ಬೇಸರ ಹೊಂದಿ ಅವನಿಂದ ದೂರ ಸರಿಯುವ ಕಾಲ ಸಮೀಪವಾಗಿದೆ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಅವನಿಗೆ ಹೀಗೆ ಉತ್ತರ ನೀಡಿದರು: ನಾವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವವರಾಗಿದ್ದೇವೆ. ನಾವು ನಿಮ್ಮ ಬಳಿಗೆ ಬಂದ ಕೆಲಸದ ಬಗ್ಗೆ ಹೇಳಿರಿ. ನೀವು ಸಾಲ ಕೊಡುವಿರೋ ಇಲ್ಲವೋ? ಕಅಬ್ ಹೇಳಿದನು: ಸಾಲ ಕೊಡುವೆ. ಆದರೆ ಏನನ್ನಾದರೂ ಒತ್ತೆ ಇಡಬೇಕು. ಮುಹಮ್ಮದ್ ಬಿನ್ ಮುಸ್ಲಿಮ ಕೇಳಿದರು: ಏನನ್ನು ಒತ್ತೆ ಇಡಬೇಕು? ಆ ದುಷ್ಟ ಹೇಳಿದನು: ನಿಮ್ಮ ಹೆಂಗಸರನ್ನು ಒತ್ತೆ ಇರಿಸಿರಿ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಸಿಟ್ಟನ್ನು ತಗ್ಗಿಸಿ ಹೇಳಿದರು: ನಿಮ್ಮಂತಹ ವ್ಯಕ್ತಿಯ ಬಳಿ ನಮ್ಮ ಹೆಂಗಸರನ್ನು ಒತ್ತೆ ಇರಿಸುವುದು ಹೇಗೆ? ಅಗ ಕಅಬ್ ಹೇಳಿದನು: ಹಾಗಾದರೆ ನಿಮ್ಮ ಪುತ್ರರನ್ನು ಒತ್ತೆ ಇರಿಸಿರಿ. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹೇಳಿದರು: ಇದು ಸಹ ಸಾಧ್ಯವಿಲ್ಲ. ನಾವು ಅರಬ್ ಜನತೆಯ ಲೇವಡಿಯನ್ನು ನಮ್ಮ

ತಲೆಯಲ್ಲಿ ಹೊತ್ತುಕೊಳ್ಳಲಾರೆವು. ಆದರೆ ನೀವು ನಮಗೆ ಉಪಕಾರ ಮಾಡುವುದಾದರೆ ನಮ್ಮ ಆಯುಧಗಳನ್ನು ಒತ್ತೆ ಇರಿಸುವೆವು. ಕಅಬ್ ಒಪ್ಪಿಗೆ ಸೂಚಿಸಿದನು. ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಮತ್ತು ಅವರ ಸಂಗಡಿಗರು ತಾವು ರಾತ್ರಿ ಅವನ ಬಳಿಗೆ ಬರುವುದಾಗಿ ಹೇಳಿ ಮರಳಿ ಹೋದರು. ರಾತ್ರಿ ಅವರು ಆಯುಧಗಳನ್ನು ತೆಗೆದುಕೊಂಡು ಕಅಬನ ಮನೆಗೆ ಹೋದರು. ಕಅಬನನ್ನು ಮನೆಯ ಹೊರಗೆ ಕರೆದು ಅವನೊಂದಿಗೆ ಮಾತನಾಡುತ್ತಾ ಒಂದು ಕಡೆಗೆ ಕರೆದುಕೊಂಡು ಹೋಗಿ ಅಲ್ಲಿ ಆತನನ್ನು ಕೊಂದರು. ಮುಹಮ್ಮದ್ ಬಿನ್ ಮುಸ್ಲಿಮ ಮತ್ತು ಸಂಗಡಿಗರು ಅಲ್ಲಿಂದ ಬೇಗನೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಆ ಹತ್ಯೆ ಬಗ್ಗೆ ತಿಳಿಸಿದರು.

ಕಅಬನು ಹತ್ಯೆ ಮಾಡಲ್ಪಟ್ಟನೆಂಬ ಸಮಾಚಾರ ಬಹಿರಂಗವಾದಾಗ ನಗರದಲ್ಲಿ ಆತಂಕದ ಪರಿಸ್ಥಿತಿ ತಲೆದೋರಿತು. ಯಹೂದಿಯರು ಬಹಳ ಉದ್ವೇಗಭರಿತರಾದರು. ಬೆಳಗ್ಗೆ ಯಹೂದಿಯರ ಒಂದು ಪ್ರತಿನಿಧಿ ಸಂಘ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದು ತಮ್ಮ ನಾಯಕ ಕಅಬನನ್ನು ಹತ್ಯೆ ಮಾಡಲಾಗಿದೆ ಎಂದು ದೂರು ನೀಡಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರ ಮಾತುಗಳನ್ನು ಆಲಿಸಿದ ನಂತರ ಕಅಬ್‌ನ ಅಪರಾಧಗಳನ್ನು ಒಂದೊಂದಾಗಿ ವಿವರಿಸಿ ಅವರಿಗೆ ಹೇಳಿದರು. ಕಅಬನು ಮಾಡಿದ ಒಪ್ಪಂದದ ಉಲ್ಲಂಘನೆ, ಪಿತೂರಿ, ಅಶ್ಲೀಲ ಮಾತುಗಳ ಪ್ರಚಾರ, ವಧಿಸಲು ಗೂಢಾಲೋಚನೆ ಮಾಡಿದುದು ಮೊದಲಾದುವುಗಳನ್ನು ಸಂಕ್ಷಿಪ್ತವಾಗಿ ಅವರಿಗೆ ನೆನಪಿಸಿಕೊಟ್ಟರು. ಆಗ ಆ ಯಹೂದಿಯರು ಹೆದರಿಕೊಂಡು ಮೌನವನ್ನು ಅವಲಂಬಿಸಿದರು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇನ್ನು ಮುಂದೆಯಾದರೂ ನೀವು ಶಾಂತಿ ಮತ್ತು ಸೌಹಾರ್ದದಿಂದ ಜೀವಿಸಿರಿ. ಹಗೆತನ ಮತ್ತು ಪಿತೂರಿಯ ಬೀಜ ಬಿತ್ತಬೇಡಿರಿ ಎಂದು ಹೇಳಿದರು. ಹಾಗೆ ಯಹೂದಿಯರ ಒಪ್ಪಿಗೆ ಪಡೆದು ಮುಂದಿನ ಕಾಲಕ್ಕೆ ಅನ್ವಯಿಸುವ ಒಂದು ಹೊಸ ಒಪ್ಪಂದ ಪತ್ರ ಬರೆಯಲಾಯಿತು. ಯಹೂದಿಯರು ಮುಸ್ಲಿಮರೊಂದಿಗೆ ಶಾಂತಿ ಮತ್ತು ಸೌಹಾರ್ದದಿಂದ ಜೀವಿಸುವ ಬಗ್ಗೆ ಮತ್ತು ಪಿತೂರಿಯ ವಿಧಾನಗಳನ್ನು ತ್ಯಜಿಸುವ ಬಗ್ಗೆ ಹೊಸದಾಗಿ ವಾಗ್ದಾನ ಮಾಡಿದರು.

ಕಅಬನು ಅಪರಾಧಿಯಾಗಿರದಿದ್ದರೆ ಯಹೂದಿಯರು ಇಷ್ಟು ಸುಲಭವಾಗಿ ಹೊಸ ಒಪ್ಪಂದ ಮಾಡುತ್ತಿರಲಿಲ್ಲ. ಅವನ ಹತ್ಯೆಯ ಬಗ್ಗೆ ಮೌನವಾಗಿರುತ್ತಿರಲೂ ಇಲ್ಲ. ಅವರ ಹೃದಯಗಳು ಕಅಬನು ಶಿಕ್ಷೆಗೆ ಅರ್ಹನಾಗಿದ್ದನೆಂದು ಮನವರಿಕೆ ಮಾಡಿತ್ತು.

ಕಅಬ್ ಬಿನ್ ಅಶ್ರಫನ ಹತ್ಯೆ ಬಗ್ಗೆ ಕೆಲವು ಪಾಶ್ಚಿಮಾತ್ಯ ಚರಿತ್ರೆಗಾರರು ಬಹಳ ಹೆಚ್ಚು ಬರೆದಿದ್ದಾರೆ. ಅದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವ್ಯಕ್ತಿತ್ವದ ಮೇಲಿರುವ ಒಂದು ಕಪ್ಪು ಚುಕ್ಕೆ ಎಂದು ಪ್ರಕಟಿಸಿ ಆ ಹತ್ಯೆಯ ಬಗ್ಗೆ ಆಕ್ಷೇಪಗಳನ್ನು ಮಾಡಿದ್ದಾರೆ. ಆದರೆ ಮೊದಲು ನೋಡಬೇಕಾದುದೇನೆಂದರೆ ಆ ಹತ್ಯೆ ಧರ್ಮ ಬದ್ಧವಾಗಿತ್ತೇ ಎಂಬುದನ್ನಾಗಿದೆ. ಎರಡನೆಯದಾಗಿ ಹತ್ಯೆಯ ವಿಧಾನ ಸರಿಯಾಗಿತ್ತೇ ಎಂಬುದನ್ನಾಗಿದೆ.

ನೆನಪಿಡಬೇಕಾದುದೇನೆಂದರೆ ಕಅಬ್ ಬಿನ್ ಅಶ್ರಫ್, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕ್ರಮಬದ್ಧವಾಗಿ ಶಾಂತಿ ಮತ್ತು ಸುರಕ್ಷೆಯ ಒಪ್ಪಂದ ಮಾಡಿದ್ದನು. ಮುಸ್ಲಿಮರ ವಿರುದ್ಧ ಕೆಲಸ ಮಾಡುವುದಿಲ್ಲ ಎಂದು ಒಪ್ಪಿಕೊಂಡಿದ್ದನಲ್ಲದೆ ಬಾಹ್ಯ ಶತ್ರುಗಳು ಮುಸ್ಲಿಮರನ್ನು ಆಕ್ರಮಿಸಲು ಬಂದರೆ ಮುಸ್ಲಿಮರಿಗೆ ಸಹಾಯವನ್ನು ಮಾಡುವುದಾಗಿ ಸಹ ಒಪ್ಪಿಕೊಂಡಿದ್ದನು. ಮುಸ್ಲಿಮರೊಂದಿಗೆ ಸ್ನೇಹ ಸಂಬಂಧ ಹೊಂದುವುದಾಗಿ ವಾಗ್ದಾನ ಮಾಡಿದ್ದನು. ಆ ಒಪ್ಪಂದದ ಪ್ರಕಾರ ಮದೀನದಲ್ಲಿ ಪ್ರಜಾಪ್ರಭುತ್ವದ ಸಾಮ್ರಾಜ್ಯವನ್ನು ನಿರ್ಮಿಸಲಾಗಿತ್ತು ಅದರ ಅಧ್ಯಕ್ಷರು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲರು ಎಂದು ಒಪ್ಪಲಾಗಿತ್ತು ಮತ್ತು ಪ್ರತಿಯೊಂದು ಜಗಳಗಳಲ್ಲಿ ಅವರ ತೀರ್ಪು ಸ್ವೀಕಾರಾರ್ಹವಾಗುವುದು ಎಂದು ಒಪ್ಪಲಾಗಿತ್ತು. ಇತಿಹಾಸದಿಂದ ಸಾಬೀತಾಗಿರುವ ವಿಷಯವೇನೆಂದರೆ ಈ ಒಪ್ಪಂದದ ಮೆರೆಗೆ ಯಹೂದಿಯರು ತಮ್ಮ ಮುಖದ್ದಮೆಗಳನ್ನು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸನ್ನಿಧಿಯಲ್ಲಿ ನೀಡಿ ಅವರಿಂದ ತೀರ್ಪನ್ನು ಪಡೆಯುತ್ತಿದ್ದರು.

ಆದರೆ ಕಅಬನು ಎಲ್ಲಾ ಒಪ್ಪಂದಗಳನ್ನು ಕಡೆಗಣಿಸಿ ಮುಸ್ಲಿಮರ ವಿರುದ್ಧ ದ್ರೋಹವೆಸಗಿದನು. ಮಾತ್ರವಲ್ಲ ವಾಸ್ತವಿಕವಾಗಿ ಆ ಕಾಲದ ಆಡಳಿತೆ ವ್ಯವಸ್ಥೆ ವಿರುದ್ಧ ವಿದ್ರೋಹ ಮಾಡಿದ್ದನು. ಇಂದಿನ ಕಾಲದ ನಾಗರಿಕ ಸರಕಾರಗಳು ವಿದ್ರೋಹ, ವಿಧ್ವಂಸಕ ಕೃತ್ಯಗಳಿಗೂ, ಹತ್ಯೆ ಮಾಡಲು ಗೂಢಾಲೋಚನೆ ನಡೆಸುವುದಕ್ಕೂ ಅಪರಾಧಿಗಳಿಗೆ ಮರಣದಂಡನೆ ನೀಡುತ್ತಾ ಇಲ್ಲವೆ?

ಕಅಬನನ್ನು ಕೊಲೆ ಮಾಡಿದ ರೀತಿ ಸರಿಯಾಗಿತ್ತೇ ಎಂಬುದಕ್ಕೆ ಉತ್ತರವಾಗಿ ಹಝ್ರತ್ ಬಶೀರ್ ಅಹ್ಮದ್ ಸಾಹಿಬ್ ಹೀಗೆ ಹೇಳುತ್ತಾರೆ: ಆ ಕಾಲದಲ್ಲಿ ಅರಬ್ ದೇಶದಲ್ಲಿ ವ್ಯವಸ್ಥಿತವಾದ ಸರಕಾರವಿರಲಿಲ್ಲ. ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಂದು ಗೋತ್ರ ಸ್ವತಂತ್ರವಾಗಿ ವರ್ತಿಸುತ್ತಿದ್ದವು. ಅಂತಹ ಸ್ಥಿತಿಯಲ್ಲಿ ಕಅಬನ ವಿರುದ್ಧ ಮೊಕದ್ದಮೆ ದಾಖಲಿಸಿ ನ್ಯಾಯಾಲಯದಿಂದ ಶಿಕ್ಷೆಯ ಆಜ್ಞೆ ಗಳಿಸಲು ಸಾಧ್ಯವಿರಲಿಲ್ಲ. ಯಹೂದಿಯರಿಗೆ ಅವನ ಬಗ್ಗೆ ದೂರು ನೀಡಬೇಕಾಗಿತ್ತೇ? ಅವನು ಸ್ವತಃ ಯಹೂದಿಯರ ನಾಯಕನಾಗಿದ್ದನು ಮತ್ತು ಅವನು ಸ್ವತಃ ಮುಸ್ಲಿಮರ ವಿರುದ್ಧ ದ್ರೋಹ ಎಸಗಿದ್ದನು ಮತ್ತು ಯಾವಾಗಲೂ ಅವನೇ ಜಗಳ ಹುಟ್ಟು ಹಾಕುತ್ತಿದ್ದನು. ಇಲ್ಲದಿದ್ದರೆ ಮಕ್ಕ ಖುರೈಶರ ಹತ್ತಿರ ಮುಖದ್ದಮೆ ದಾಖಲು ಮಾಡಲು ಸಾಧ್ಯವಾಗಿತ್ತೆ? ಅವರು ಸ್ವತಃ ಮುಸ್ಲಿಮರ ಕಠೂರ ವಿರೋಧಿಗಳಾಗಿದ್ದರು. ಅಥವಾ ಸುಲೇಮ್ ಮತ್ತು ಗತ್‌ಫಾನ್ ಗೋತ್ರದವರೊಂದಿಗೆ ಸಹಾಯ ಯಾಚಿಸಲು ಸಾಧ್ಯವಾಗಿತ್ತೆ? ಅವರು ಸ್ವತಃ ಕೆಲವು ತಿಂಗಳಿನಿಂದ ಮೂರು ನಾಲ್ಕು ಸಾರಿ ಮದೀನದ ಮೇಲೆ ದಾಳಿ ಮಾಡಲು ಪ್ರಯತ್ನಿಸಿದ್ದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್[ರ] ಬರೆಯುತ್ತಾರೆ ಯೋಚಿಸಿ ನೋಡಿರಿ ಮುಸ್ಲಿಮರಿಗೆ ಇನ್ನಾವ ದಾರಿ ಉಳಿದಿತ್ತು ಎಂದು. ಓರ್ವ ವ್ಯಕ್ತಿಯ ಒಪ್ಪಂದದ ಉಲ್ಲಂಘನೆ, ಪಿತೂರಿ, ಅಶ್ಲೀಲ ಮಾತುಗಳ ಪ್ರಚಾರ, ವಧಿಸಲು ಗೂಢಾಲೋಚನೆ ಮಾಡುವುದರ ಕಾರಣದಿಂದ ರಾಜ್ಯದಲ್ಲಿ ಶಾಂತಿಯನ್ನು ಕಾಪಾಡುವ ನಿಟ್ಟಿನಲ್ಲಿ ಅವನನ್ನು ಕೊಲ್ಲುವುದು ಉತ್ತಮವಾಗಿರುತ್ತದೆ ಹೀಗೆ ಮಾಡುವುದರಿಂದ ರಾಜ್ಯದ ಅನ್ಯ ಜನರ ಜೀವಕ್ಕೆ ಅಪಾಯವಿರುವುದಿಲ್ಲ ಮತ್ತು ರಾಜ್ಯದಲ್ಲಿ ಶಾಂತಿ ಇರುವುದು.

ನೆನಪಿಡಬೇಕಾದುದೇನೆಂದರೆ ಹಿಜ್‌ರತ್ ನಂತರ ಮದೀನದಲ್ಲಿ ಮುಸ್ಲಿಮರು ಮತ್ತು ಯಹೂದಿಯರ ಮಧ್ಯೆ ಮಾಡಲ್ಪಟ್ಟ ಒಪ್ಪಂದದ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇವಲ ಒಬ್ಬ ಸಾಮಾನ್ಯ ಪ್ರಜೆಯ ಸ್ಥಾನವನ್ನಲ್ಲ ಹೊಂದಿದ್ದುದು. ಅವರು ಆ ನಗರ ಪ್ರಜಾ ಪ್ರಭುತ್ವದ ಅಧ್ಯಕ್ಷರಾಗಿ ಗಣಿಸಲ್ಪಟ್ಟಿದ್ದರು. ಅವರಿಗೆ ಎಲ್ಲಾ ಜಗಳಗಳ ಬಗ್ಗೆಯೂ ರಾಜಕೀಯ ವಿಷಯಗಳ ಬಗ್ಗೆಯೂ ತನಗೆ ಯೋಗ್ಯವೆಂದು ತೋರುವ ತೀರ್ಮಾನ ಕೈಗೊಳ್ಳಬಹುದು ಎಂದು ಅವರಿಗೆ ಅಧಿಕಾರ ನೀಡಲಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದೇಶದಲ್ಲಿ ಶಾಂತಿ ಸ್ಥಾಪಿಸಲು ಮತ್ತು ಕಅಬನ ಪಿತೂರಿಯ ಕಾರಣ ಅವನು ವಧಾರ್ಹನೆಂದು ವಿಧಿಸಿದರು.

ಆದ್ದರಿಂದ ಅವನನ್ನು ವಧಿಸುವ ತೀರ್ಮಾನದ ಬಗ್ಗೆ ಆಕ್ಷೇಪ ಎಸಗಲು ಅವಕಾಶವಿರುವುದಿಲ್ಲ. ಇತಿಹಾಸದಿಂದ ಇದು ಸಹ ಸಾಬೀತಾಗಿದೆ ಅಂದರೆ ಸ್ವತಃ ಯಹೂದೀಯರು ಸಹ ಕಅಬ್‌ನ ಈ ಶಿಕ್ಷೆಯನ್ನು ಅವನ ಅಪರಾಧಕ್ಕೆ ತಕ್ಕದಾದ ಶಿಕ್ಷೆ ಎಂದು ಸುಮ್ಮನಾಗಿದ್ದರು. ಯಾರೂ ಆಕ್ಷೇಪ ಮಾಡಲಿಲ್ಲ. ಒಂದು ವೇಳೆ ಈ ಆಕ್ಷೇಪ ಬಂದರು ಸಹ ಅಂದರೆ ಅವನನ್ನು ವಧಿಸುವ ಶೀಕ್ಷೆ ನೀಡುವುದಕ್ಕೆ ಮುಂಚೆ ಯಹೂದಿಯರನ್ನು ಕರೆಸಿ ಕಅಬ್‌ನ ಅಪರಾಧಗಳನ್ನು ತಿಳಿಸಬೇಕಾಗಿತ್ತು ಅನಂತರ ಅವನಿಗೆ ವಧಿಸಲು ಆಜ್ಞಾಪನೆ ಮಾಡಬೇಕಾಗಿತ್ತು. ಅದರ ಉತ್ತರ ಹೀಗಿದೆ ಆ ಸಮಯದ ಪರಿಸ್ಥಿತಿಯು ಬಹಳ ನಾಜೂಕಾಗಿತ್ತು ಇಂತಹ ತೀರ್ಮಾನಗಳನ್ನು ತೆಗೆದುಕೊಳ್ಳುವುದರಿಂದ ಅಂತರರಾಷ್ಟ್ರೀಯ ಸಮಸ್ಯೆಗಳು ಬಹಳ ಹೆಚ್ಚಾಗುವ ಸಾಧ್ಯತೆಗಳ ಬಗ್ಗೆ ಸಂಶಯವಿರಲಿಲ್ಲ. ಮದೀನದ ಪರಿಸ್ಥಿತಿಯು ಬಹಳ ಅಪಾಯಕಾರಿ ಮತ್ತು ಅಂತರ್ಯುದ್ಧಗಳು ಪ್ರಾರಂಭವಾಗುವ ಸಾಧ್ಯತೆ ಇತ್ತು. ಆದ್ದರಿಂದ ಇಂತಹ ಕೆಲಸಗಳನ್ನು ರಹಸ್ಯ ಮಾಡಿದರೆ ಉತ್ತಮವಾಗಿರುತ್ತದೆ. ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಶಾಂತಿ ಕಾಪಾಡಲು ರಹಸ್ಯವಾಗಿ ಈ ಶಿಕ್ಷೆಯ ತೀರ್ಪನ್ನು ಜಾರಿಗೊಳಿಸಿದರು ಆದರೆ ಇದರಲ್ಲಿ ಯಾವುದೇ ರೀತಿಯ ಮೋಸವಿರಲಿಲ್ಲ ಮತ್ತು ರಸೂಲ್[ಸ] ಅವರು ಎಂದೂ ಈ ಶಿಕ್ಷೆಯನ್ನು ರಹಸ್ಯವಾಗಿರಿಸಲು ಬಯಸಲಿಲ್ಲ. ಏಕೆಂದರೆ ಕೊಲೆಯಾದ ಮಾರನೇಯ ದಿವಸ ಯಹೂದಿಯರ ಒಂದು ಗುಂಪು ಅವರ ಬಳಿ ಬಂದಾಗ ಅವರು ತಕ್ಷಣವೇ ಸಂಪೂರ್ಣ ವಿಷಯವನ್ನು ತಿಳಿಸಿದರು ಮತ್ತು ಈ ಕಾರ್ಯಕ್ಕೆ ಕಾರಣ ಅವರೇ ಎಂದು ಹೇಳಿದರು. ಹೀಗೆ ಇದರಲ್ಲಿ ಮೋಸದ ಪ್ರಶ್ನೆ ಉದ್ಭವಿಸುವುದೇ ಇಲ್ಲ. ಮತ್ತು ಯಹೂದಿಯರಿಗೆ ಕಅಬ್‌ನ ಅಪರಾಧಗಳನ್ನು ತಿಳಿಸಿ ಹೇಳಿದರು. ಈ ಅಪಾಯಗಳಿಂದ ಅವನಿಗೆ ಈ ಶಿಕ್ಷೆ ನನ್ನ ಆಜ್ಞೆಯ ಅನುಸಾರ ನೀಡಲಾಯಿತು ಎಂದು ತಿಳಿಸಿದರು.

ಇನ್ನೊಂದು ಆಕ್ಷೇಪ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಸಹಾಬರಿಗೆ ಸುಳ್ಳು ಹೇಳಲು ಮತ್ತು ಮೋಸ ಮಾಡಲು ಅನುಮತಿ ನೀಡಿದರು ಎಂದು. ಈ ಆಕ್ಷೇಪ ತಪ್ಪಾಗಿವೆ. ಹದೀಸಿನಲ್ಲಿರುವ ಸತ್ಯವಾದ ವರದಿಗಳು ಈ ಆಕ್ಷೇಪವನ್ನು ಅಲ್ಲಗಳೆಯುತ್ತವೆ. ಬುಖಾರಿಯ ಹದೀಸು ಗ್ರಂಥದಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೀಗೆ ಹೇಳಿದ್ದರು: ಕಅಬನನ್ನು ರಹಸ್ಯವಾಗಿ ಕೊಲೆ ಮಾಡಲು ಏನನ್ನಾದರೂ ಹೇಳಬೇಕಾಗಬಹುದು ಎಂದು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ರಹಸ್ಯ ಹತ್ಯೆಯಿಂದ ದೊರಕಬಹುದಾದ ಬೃಹತ್ತಾದ

ಒಳಿತನ್ನು ಪರಿಗಣಿಸಿ 'ಹೌದು' ಎಂದು ಮಾತ್ರ ಹೇಳಿದ್ದರು. ಆ ಸಂದರ್ಭದಲ್ಲಿ ಅದಕ್ಕಿಂತ ಹೆಚ್ಚಾಗಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಾಗಲಿ ಹಝ್ರತ್ ಮುಹಮ್ಮದ್ ಬಿನ್ ಮುಸ್ಲಿಮರಾಗಲಿ ಏನನ್ನೂ ಹೇಳಿರಲಿಲ್ಲ. ರಸೂಲುಲ್ಲಲ್ಲಾಹ್ ಸಲ್ಲಲ್ಲಾಹು ಅಲಯಹಿವಸಲ್ಲಮರ ಉದ್ದೇಶವು ಕೇವಲ ಮುಹಮ್ಮದ್ ಬಿನ್ ಮುಸ್ಲಿಮ[ರ] ಹಾಗೂ ಅವರ ಸಂಗಡಿಗರು ಕಅಬ್‌ನನ್ನು ತನ್ನ ಮನೆಯಿಂದ ಹೊರತರಲು ಅವರಿಗೆ ಇಂತಹ ಯಾವುದಾದರು ವಿಷಯ ಬೇಕಾಗಿತ್ತು. ಇದರಿಂದ ಕಅಬ್ ಮನೆಯಿಂದ ಹೊರ ಬರಲು ಸಿದ್ಧನಾಗಬೇಕು ಹೀಗೆ ಮಾಡುವುದರಲ್ಲಿ ಯಾವುದೇ ರೀತಿಯ ದೋಷ ಇಲ್ಲ. ಯುದ್ಧದ ಸಂದರ್ಭಗಳಲ್ಲಿ ಗೂಢಚಾರರು ತಮ್ಮ ಕೃತ್ಯ ನಿರ್ವಹಿಸಲು ಎಂತಹ ಮಾತುಗಳನ್ನು ಹೇಳುತ್ತಾರೆಂದರೆ ಅವುಗಳ ಬಗ್ಗೆ ವಿವೇಕಶಾಲಿಗಳು ಎಂದೂ ಆಕ್ಷೇಪ ಪ್ರಕಟಿಸುವುದಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪರಿಶುದ್ಧತೆಗೆ ಕಳಂಕ ತಲೆದೋರುವಂತಹ ಏನೂ ಅಲ್ಲಿ ಸಂಭವಿಸಲಿಲ್ಲ. ಇನ್ನುಳಿದದ್ದು ಮುಹಮ್ಮದ್ ಬಿನ್ ಮುಸ್ಲಿಮ[ರ] ಅವರ ವಿಷಯ. ಅವರ ಮಾತುಗಳಲ್ಲಿಯೂ ಸಹ ಯಾವುದೇ ಮಾತು ನೈತಿಕತೆಗೆ ವಿರುದ್ಧ ಇರಲಿಲ್ಲ. ಅವರು ತಪ್ಪು ಮಾತಾಡಲಿಲ್ಲ ಆದರೆ ತಮ್ಮ ಕರ್ತವ್ಯವನ್ನು ಪೂರ್ಣಗೊಳಿಸಲು ಕೆಲವು ದಂದ್ವಾರ್ಥ ಪದಗಳನ್ನು ಉಪಯೋಗಿಸಿದರು. ಇದಲ್ಲದೆ ಅವರಲ್ಲಿ ಬೇರೆ ಯಾವ ಮಾರ್ಗವು ಇರಲಿಲ್ಲ. ಯುದ್ಧದ ಸಂದರ್ಭದಲ್ಲಿ ಓರ್ವ ಬುದ್ಧಿವಂತ ಹಾಗೂ ನಿಷ್ಠಾವಂತನ ಸಮೀಪ ಇಂತಹ ಮಾತುಗಳು ತಪ್ಪಾಗುವುದಿಲ್ಲ.

ಕೆಲವರು ಹೀಗೆ ಪ್ರಶ್ನಿಸಿದ್ದಾರೆ – ಯುದ್ಧದಲ್ಲಿ ಸುಳ್ಳು ಹೇಳುವುದು, ಮೊಸ ಮಾಡುವುದು ಧರ್ಮಬದ್ಧವೇ? ಕೆಲವು ಹದೀಸುಗಳಲ್ಲಿ ಹೀಗೆ ವರದಿಯಾಗಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳುತ್ತಾ ಇದ್ದರು **ಅಲ್ ಹರ್‌ಬು ಖುದ್‌ಅತುನ್** ಯುದ್ಧ ಒಂದು ಮೋಸ ಕೃತ್ಯವಾಗಿದೆ ಎಂದು. ಈ ಹದೀಸಿನಿಂದ (ನಊಧುಬಿಲ್ಲಾಹ್) ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧದಲ್ಲಿ ಮೋಸ ಮಾಡಲು ಅನುಮತಿ ನೀಡಿದ್ದಾರೆ ಎಂದು ವ್ಯಾಖ್ಯಾನಿಸಲಾಗುತ್ತದೆ. ಒಂದನೆಯದಾಗಿ, **ಅಲ್ ಹರ್‌ಬು ಖುದ್‌ಅತುನ್** ಎಂಬುದರ ಅರ್ಥ ಯುದ್ಧದಲ್ಲಿ ಮೋಸ ಮಾಡಬಹುದು ಎಂದಲ್ಲ. ಅದರ ಅರ್ಥ **ಯುದ್ಧ ಸ್ವತಃ ಒಂದು ಮೋಸಗಾರಿಕೆಯಾಗಿದೆ** ಎಂದು ಮಾತ್ರ. ಅಂದರೆ ಯುದ್ಧದ ಬಗ್ಗೆ ಏನಾಗುವುದು ಎಂದು ಹೇಳಲು ಸಾಧ್ಯವಿಲ್ಲ. ಅಂದರೆ ಯುದ್ಧದ ಫಲಿತಾಂಶವು ಅನೇಕ ಮಾತುಗಳನ್ನು ಒಳಗೊಂಡಿರುತ್ತದೆ ಎಂತಹದ್ದೇ ಸಂದರ್ಭವಾಗಿರಲಿ ಏನಾಗಬಹುದು ಎಂದು ಹೇಳಲಿಕ್ಕೆ ಸಾಧ್ಯವಾಗುವುದಿಲ್ಲ. ಈ ಅರ್ಥವನ್ನು ಈ ಹದೀಸಿನ ವರದಿಯಿಂದ ದೃಢಿಕರಣವಾಗುತ್ತದೆ. ಒಂದು ವರದಿಯು ಹೀಗಿದೆ ರಸೂಲುಲ್ಲಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ನುಡಿಯುತ್ತಾರೆ: **ಸುಮ್ಮಿಯಲ್ ಹರ್‌ಬು ಖುದ್‌ಅತನ್** ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧವನ್ನು ಮೋಸಗಾರಿಕೆ ಎಂದು ಹೆಸರಿಸಿದರು. ಈ ಎರಡು ಹದೀಸುಗಳನ್ನು ಒಟ್ಟಿಗೆ ಪರಾಂಬರಿಸುವಾಗ, ಯುದ್ಧದಲ್ಲಿ ಮೋಸಗಾರಿಕೆಯಿಂದ ವರ್ತಿಸುವುದು ಧರ್ಮಬದ್ಧವೆಂದು ಅವರು ಹೇಳಿರಲಿಲ್ಲ. ಬದಲಾಗಿ ಅವರು ಹೇಳಿದುದು ಯುದ್ಧವೇ ಒಂದು ಮೋಸದ ಕೃತ್ಯ ಎಂದು. ಇದರ ಅರ್ಥ ಏನೆಂದರೆ ಯುದ್ಧದಲ್ಲಿ ತನ್ನ ಶತ್ರುಗಳನ್ನು ತಂತ್ರದಿಂದ ತಮ್ಮ ಅಧೀನದಲ್ಲಿರಿಸಿ ಕೊಲುವುದು ಧರ್ಮಬದ್ಧವಾಗಿದೆ.

ಯುದ್ಧ ತಂತ್ರಗಳು ವಿವಿಧ ರೀತಿಗಳಲ್ಲಿ ಇರುತ್ತವೆ. ಉದಾಹರಣೆಗೆ ಸಹೀಹ್ ಹದೀಸುಗಳಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಯುದ್ಧಕ್ಕೆ ಹೊರಡುವಾಗ ಸಾಮಾನ್ಯವಾಗಿ ತಾವು ಉದ್ದೇಶಿಸಿದ ಲಕ್ಷ್ಯ ಸ್ಥಳ ಯಾವುದೆಂದು ಬಹಿರಂಗಪಡಿಸುತ್ತಿರಲಿಲ್ಲ. ಕೆಲವು ಸಾರಿ ಅವರು ದಕ್ಷಿಣದ ಕಡೆಗೆ ಹೋಗಬೇಕಾಗಿದ್ದಾಗ ಮೊದಲು ಅವರು ಉತ್ತರಾಭಿಮುಖವಾಗಿ ಸಾಗಿ ಅನಂತರ ಸುತ್ತಿ ಬಳಸಿ ದಕ್ಷಿಣದ ಕಡೆಗೆ ಹೋಗುತ್ತಿದ್ದರು. ಯಾರಾದರೂ ನೀವೆಲ್ಲಿಂದ ಬಂದಿರಿ ಎಂದು ಕೇಳಿದಾಗ ಮದೀನದ ಹೆಸರು ಹೇಳದೆ ಮದೀನದಿಂದ ದೂರದ ಅಥವಾ ಮದೀನಕ್ಕೆ ಸಮೀಪದ ಬೇರೆ ಯಾವುದಾದರೂ ಸ್ಥಳದ ಹೆಸರು ಹೇಳುತ್ತಿದ್ದರು. ಅಥವಾ ಇದೇ ರೀತಿಯ ಬೇರೆ ಧರ್ಮಬದ್ಧ ಉಪಾಯಗಳನ್ನು ಕೈಗೊಳ್ಳುತ್ತಿದ್ದರು. ಪವಿತ್ರ ಖುರ್‌ಆನ್‌ನಲ್ಲಿ ಸೂಚಿಸಿರುವಂತೆ, ಸಹಾಬರು ಕೆಲವು ಸಾರಿ ಹೇಗೆ ಮಾಡುತ್ತಿದ್ದರೆಂದರೆ ಶತ್ರುಗಳನ್ನು ನಿರ್ಲಕ್ಷ್ಯತೆ ಹೊಂದಿದವರನ್ನಾಗಿ ಮಾಡಲು ರಣಾಂಗಣದಿಂದ ಹಿಂದೆ ಸರಿದು ಹೋಗುತ್ತಿದ್ದರು ಮತ್ತು ಶತ್ರುಗಳು ನಿರ್ಲಕ್ಷ್ಯತೆ ಹೊಂದಿದಾಗ ಮತ್ತು ಶತ್ರು ಸೈನ್ಯ ಅಸ್ತವ್ಯಸ್ತ ಸ್ಥಿತಿಯಲ್ಲಿರುವಾಗ ಅಚಾನಕವಾಗಿ ಆಕ್ರಮಣ ಮಾಡುತ್ತಿದ್ದರು. ಇವೆಲ್ಲಾ **ಖುದ್‌**ಅದ ವಿವಿಧ ರೂಪಗಳಾಗಿವೆ. ಅವು ಯುದ್ಧದ ಕಾಲದಲ್ಲಿ ಧರ್ಮಬದ್ಧವಾಗಿವೆ. ಆದರೆ ಸುಳ್ಳು ಮತ್ತು ವಿದ್ರೋಹವನ್ನು ಇಸ್ಲಾಮ್ ಅತ್ಯಂತ ತೀವ್ರವಾಗಿ ನಿಷಿದ್ಧಗೊಳಿಸುತ್ತದೆ. ಹೀಗೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಾವಾನ್ಯವಾಗಿ ಹೇಳುತ್ತಿದ್ದರು: ಇಸ್ಲಾಮಿನಲ್ಲಿ ಅಲ್ಲಾಹನೊಂದಿಗೆ ಸಹಭಾಗಿತ್ವಗೊಳಿಸುವುದು ಮತ್ತು ಪೋಷಕರ ಹಕ್ಕುಗಳನ್ನು ವಜಗೊಳಿಸುವುದರ ನಂತರ ಸುಳ್ಳು ಹೇಳುವುದು ಬಹು ದೊಡ್ಡ ಪಾಪವಾಗಿದೆ ಎಂದು. ಅದೇ ರೀತಿ ಹೀಗು ಹೇಳುತ್ತಿದ್ದರು ಅಂದರೆ ಈಮಾನ್ ಹಾಗೂ ಹೇಡಿತನವು ಒಂದು ಕಡೆ ಸೇರಬಹುದು ಅದರೆ ಈಮಾನ್ ಮತ್ತು ಸುಳ್ಳು ಒಂದು ಕಡೆ ಸೇರಲು ಸಾಧ್ಯ ಇಲ್ಲ. ಮತ್ತು ಮೋಸ ಹಾಗೂ ದ್ರೋಹದ ಬಗ್ಗೆ ಹೇಳುತ್ತಾರೆ ಯಾರು ವಿದ್ರೋಹ ಮಾಡುತ್ತಾನೋ ಆತನು ಪ್ರಳಯದ ದಿವಸ ಅಲ್ಲಾಹನ ಕೊಪಕ್ಕೀಡಾಗುವನು. ಹೀಗೆ ಯುದ್ಧದ ಸಂದರ್ಭದಲ್ಲಿ ಖುದ್‌ಅತುನ್‌ನ ಅವಕಾಶ ನೀಡಲಾಗಿದೆ ಅದರ ಅರ್ಥ ನಿಜವಾಗಿ ಮೋಸ ಅಥವಾ ಸುಳ್ಳು ಅಲ್ಲ ಬದಲಿಗೆ ಯುದ್ಧದ ಸಂದರ್ಭದಲ್ಲಿ ಶತ್ರುಗಳನ್ನು ಎಚ್ಚರಗೆಡಿಸುವುದಕ್ಕೆ ಉಪಯೋಗಿಸುವಂತಹ ಯುದ್ಧ ತಂತ್ರಗಳಾಗಿವೆ. ಕೆಲವೊಮ್ಮೆ ಅದು ಬಾಹ್ಯವಾಗಿ ಸುಳ್ಳು ಎಂದು ಎನಿಸಿದರು ಅದು ಸುಳ್ಳಾಗುವುದಿಲ್ಲ. ಆದ್ದರಿಂದ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್[ರ] ಬರೆಯುತ್ತಾರೆನವ್ಮು ಪ್ರಕಾರ ಕೆಳಗೆ ನಮೂದಿಸುಲಾಗುತ್ತಿರುವ ಹದೀಸ್ ಅದನ್ನು ದೃಢೀಕರಿಸುತ್ತದೆ. ಆ ಹದೀಸ್ ಹೀಗಿದೆ: ಉಮ್ಮೆ ಕುಲ್‌ಸೂಮ್ ಬಿನ್ತ್ ಉಖ್‌ಬ ವರದಿ ಮಾಡುತ್ತಾರೆ: ನಾನು ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಕೇವಲ ಮೂರು ಸನ್ನಿವೇಶಗಳಲ್ಲಿ ಇದರ ಅವಕಾಶ ನೀಡುತ್ತಿರುವುದನ್ನು ಕೇಳಿದ್ದೇನೆ ಅದು ಸತ್ಯವಾಗಿ ಸುಳ್ಳ ಆಗುವುದಿಲ್ಲ ಆದರೆ ಜನರು ಅದನ್ನು ಸುಳ್ಳೆಂದು ತಿಳಿಯುತ್ತಾರೆ. ಮೊದಲನೆಯದು ಯುದ್ಧದ ಸಂದರ್ಭವಾಗಿದೆ. ಎರಡನೇಯದು ಜಗಳ ಮಾಡಿಕೊಂಡಿರುವ ಇಬ್ಬರ ನಡವೆ ಸಂದಾನ ಮಾಡಿಸುವ ಸಂದರ್ಭದಲ್ಲಿ. ಮೂರನೇಯದು ಪತಿ ತನ್ನ ಪತ್ನಿಯನ್ನು ಅಥವಾ ಪತ್ನಿ ತನ್ನ ಪತಿಯನ್ನು ಸಂತೋಷಗೊಳಿಸುವ ಸಂದರ್ಭದಲ್ಲಿ. ಪ್ರತಿಯೊಂದು ಸಂದರ್ಭದಲ್ಲಿ ಒಳ್ಳೆಯ ನಿಯ್ಯತ್ ಆಗಿರಬೇಕು ಅಥವಾ ಒಳ್ಳೆಯ ಉದ್ದೇಶಗಳನ್ನು ಪಡೆಯುವುದಕ್ಕಿರಬೇಕು.

ಈ ಹದೀಸಿನಲ್ಲಿ ಯಾವ ಸಂಶಯವೂ ಇಲ್ಲ ಅಂದರೆ ಯುದ್ಧದ ಸಂದರ್ಭದಲ್ಲಿ **ಖುದ್‌ಅತುನ್‌**ನ ಅವಕಾಶ ನೀಡಲಾಗಿದೆ ಅದರ ಅರ್ಥ ನಿಜವಾಗಿ ಮೋಸ ಅಥವಾ ಸುಳ್ಳು ಅಲ್ಲ ಬದಲಿಗೆ ಯುದ್ಧದ ಸಂದರ್ಭದಲ್ಲಿ ಶತ್ರುಗಳನ್ನು ಎಚ್ಚರಗೆಡಿಸುವುದಕ್ಕೆ ಉಪಯೋಗಿಸುವಂತಹ ಯುದ್ಧ ತಂತ್ರಗಳಾಗಿವೆ. ಮತ್ತು ಇದು ಪ್ರತಿಯೊಂದು ಧರ್ಮದಲ್ಲಿ ಧರ್ಮಬದ್ಧ ಎಂದು ಪರಿಗಣಿಸಲಾಗುತ್ತದೆ.

ಕಅಬ್ ಬಿನ್ ಅಶ್ರಫ್‌ನ ಘಟನೆಯ ಪ್ರಸ್ತಾವನೆಯ ನಂತರ ಇಬ್ನೆ ಹಿಶ್ಶಾಮ್ ಈ ರೀತಿ ವರದಿ ಮಾಡುತ್ತಾರೆ: ಕಅಬ್ ಕೊಲೆಯ ನಂತರ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಸಹಾಬರಲ್ಲಿ ಹೀಗೆ ನುಡಿದರು ಈಗ ನೀವು ಯಾವ ಯಹೂದಿಯನ್ನು ಅಧೀನದಲ್ಲಿಟ್ಟುಕೊಳ್ಳುವಿರೋ ಅವನನ್ನು ಕೊಲ್ಲಿರೀ ಎಂದರು. ಹೀಗೆ ಓರ್ವ ಸಹಾಬಿ ಮುಹೈಯಿನ ಎಂಬವನು ಓರ್ವ ಯಹೂದಿಯ ಮೇಲೆ ದಾಳಿ ಮಾಡಿ ಅವನ್ನು ಕೊಂದು ಹಾಕಿದನು. ಈ ವರದಿಯನ್ನು ಅಬೂದಾಊದ್‌ನಲ್ಲಿ ಸಹ ಉಲ್ಲೇಖಿಸಲಾಗಿದೆ. ಮತ್ತು ಎರಡೂ ವರದಿಗಳ ಮೂಲ ಇಬ್ನೆ ಇಸ್ಹಾಖ್ ಆಗಿದೆ. ಹಝ್ರತ್, ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಬರೆಯುತ್ತಾರೆ ವರದಿಯ ಜ್ಞಾನದ ಪ್ರಾಕಾರ ಈ ವರದಿಯು ದುರ್ಬಲವಾಗಿದೆ. ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹೀಗೆ ಎಂದೂ ಹೇಳಲಿಲ್ಲ ಏಕೆಂದರೆ ಇಬ್ನೆ ಹಿಶ್ಶಾಮ್‌ಅವರು ಯಾವುದೇ ಆಧಾರವಿಲ್ಲದೆ ಬರೆದಿದ್ದಾರೆ. ಅಬೂ ದಾಊದ್ ನೀಡಿದ ಆಧಾರವು ಅದು ದುರ್ಬಲವಾದಿ. ಈ ಆಧಾರದಲ್ಲಿ ಇಬ್ನೆ ಅಬ್ಬಾಸ್ ವರದಿ ಹೇಳುತ್ತಾರೆ ನಾನು ಈ ಘಟನೆಯನ್ನು ಝೈದ್ ಬಿನ್ ಸಾಬಿತ್ ಸ್ವತಂತ್ರಗೊಳಿಸಿದ ಗುಲಾಮಿನಿಂದ ಕೇಳಿಸಿದೆ. ಅವನ ಹೆಸರು ಏನು ಎಂಬುದು ಗೊತ್ತಿಲ್ಲ. ಓರ್ವ ಅಪರಿಚಿತ ವ್ಯಕ್ತಿ ಆಗಿದ್ದನು. ಈಗ ಪ್ರತಿಯೊಬ್ಬರು ತಿಳಿಯಬಹುದು ಈ ರೀತಿಯ ವರದಿಗಳು ಅದರಲ್ಲಿ ಎರಡು ವರದಿಗಾರರು ಅಪರಿಚಿತರಾಗಿದ್ದಾರೆ ಎಂದರೆ ಇದನ್ನು ನಂಬುವುದು ಅಸಾಧ್ಯ. ಅದೇ ರೀತಿ 'ದರಾಯತ್'ನಿಂದನೂ (ಸಂರ್ದಭೋಚಿತವಾಗಿ) ಯೋಚಿಸಿದರೆ ಇದು ಸಾಬೀತಾಗುವುದಿಲ್ಲ. ಏಕೆಂದರೆ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಸಾಮಾನ್ಯ ವರ್ತನೆಯು ಸಹ ಈ ಮಾತನ್ನು ತ್ಯಜಿಸುತ್ತದೆ. ಅದಲ್ಲದೆ ಒಂದು ವೇಳೆ ಅದು ಒಂದು ಸಾಮಾನ್ಯವಾದ ಆದೇಶವಿರುತ್ತಿದ್ದರೆ ನಿಸ್ಸಂದೇಹವಾಗಿಯು ಆಗ ಅನೇಕ ಕೊಲೆಗಳು ನಡೆಯುತ್ತಿದ್ದೆವು ಅದರೆ ಅಂತಹ ಯಾವ ವರದಿಗಳು ದೊರೆಯುವುದಿಲ್ಲ. ಮತ್ತೆ ಸರಿಯಾದ ವರದಿಯಿಂದ ಮಾರನೇಯ ದಿವಸ ಯಹೂದಿಯರ ಮತ್ತು ಮುಸ್ಲಿಮರ ನಡವೆ ಒಂದು ಹೊಸ ಒಪ್ಪಂದವೂ ಬರೆಯಲಾಯಿತು. ಇಂತಹ ಸಂದರ್ಭದಲ್ಲಿ ಈ ಒಪ್ಪಂದದ ನಂತರವೂ ಇಂತಹ ಆಜ್ಞೆ ನೀಡಿದರು ಎಂದರು ಅದನ್ನು ಒಪ್ಪಲು ಸಾಧ್ಯವಿಲ್ಲ. ಅಂತಹ ಆಜ್ಞೆ ಏನಾದರೂ ಇರುತ್ತಿದ್ದರೆ ಯಹೂದಿಯರು ಅದನ್ನು ವಿರೋಧಿಸುತ್ತಿದ್ದರು ಆದರೆ ಹೀಗೆ ಏನು ಆಗಲಿಲ್ಲ. ಹೀಗೆ ರಿವಾಯತ್ ಹಾಗೂ ದರಾಯತ್ ಎರಡು ಪ್ರಕಾರದಿಂದ ಯೋಚಿಸಿದಾಗ ನಮಗೆ ತಿಳಿದು ಬರುವುದೇನಂದರೆ ಈ ವರದಿಯು ಸುಳ್ಳಾಗಿದೆ ಎಂದು. ಕೇವಲ ಸಾಬೇತಾಗುವುದೇನಂದರೆ ಕಅಬನು ಹತ್ಯೆ ಮಾಡಲ್ಪಟ್ಟನೆಂಬ ಸಮಾಚಾರ ಬಹಿರಂಗವಾದಾಗ ನಗರದಲ್ಲಿ ಆತಂಕದ ಪರಿಸ್ಥಿತಿ ತಲೆದೋರಿತು. ಯಹೂದಿಯರು ಬಹಳ ಉದ್ವೇಗಭರಿತರಾದಾಗ ಹುಝೂರ್[ಸ] ಅವರು

ತಮ್ಮ ಸಹಾಬರನ್ನು ಇದು ಆಗಬಹುದು. ಇದರ ಯಾವುದೇ ಆಧಾರವೂ ಇಲ್ಲ ಅಂದರೆ ಯಾವ ಯಹೂದಿಯರಿಂದ ನಿಮಗೆ ಅಪಾಯವಿದೆಯೋ ನೀವು ನಿಮ್ಮ ರಕ್ಷಣೆಯಲ್ಲಿ ಅವನನ್ನು ಕೊಲ್ಲಿರೀ ಎಂದು. ಆದರೆ ತಿಳಿದು ಬರುವುದೇನಂದರೆ ಅಂತಹ ಸನ್ನಿವೇಶವು ಕೇವಲ ಸ್ವಲ್ಪ ಹೊತ್ತಿಗೆ ಇದ್ದಿರಬಹುದು ಏಕೆಂದರೆ ಅದರ ನಂತರ ಒಪ್ಪಂದ ಬರೆಯಲಾಯಿತು.

ಅನಂತರ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್(ರ) ಪುನಃ ಬರೆಯುತ್ತಾರೆ: ಕಅಬ್ ಬಿನ್ ಅಶ್ರಫ್‌ನ ಹತ್ಯೆಯ ದಿನಾಂಕದಲ್ಲಿ ಭಿನ್ನಭಿಪ್ರಾಯವಿದೆ. ಇಬ್ನೆ ಸಅದ್ ಅದನ್ನು ರಬೀಉಲ್ ಅವ್ವಲ್ ಹಿಜರಿ 3 ಎಂದಿದ್ದಾರೆ ಆದರೆ ಇಬ್ನೆ ಹಿಶ್ಶಾಮ್ ಅವರು ಅದನ್ನು ಸರಿಯ್ಯ ಝೈದ್ ಬಿನ್ ಹಾರಿಸದ ನಂತರ ಎಂದಿದ್ದಾರೆ. ಓಟ್ಟಾರೆ ಹೇಳುವುದಾದರೆ ಜಮಾದಿಉಲ್ ಆಖಿರ್‌ನಲ್ಲಿ ಈ ಘಟನೆ ಸಂಭವಿಸಿರುವುದು. ಅವರು ಹೇಳುತ್ತಾರೆ ನಾನು ಇಲ್ಲಿ ಇಬ್ನೆ ಹಿಶ್ಶಾಮ್‌ನನ್ನು ಅನುಸರಿಸಿದ್ದೇನೆ. (ಸೀರತ್ ಖಾತಮನ್ನಬೀಯೀನ್, ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹೆಬ್ ಪುಟ-466-477)

ಇನ್ನು ಒಂದೆರಡು ಘಟನೆಗಳು ಉಳಿದಿವೆ. ಮುಂದಿನ ಖುತ್‌ಬದಲ್ಲಿ ಅದನ್ನು ವಿವರಿಸುವೆನು.

***************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮಾಡುವ ಪ್ರಯತ್ನ ಮಾಡುವ ಶಕ್ತಿಯುಳ್ಳವರು ಬೇಕಾಗಿದ್ದಾರೆ. ಇದೊಂದು ಸಾಬೀತಾದ ವಿಷಯವಾಗಿದೆ. ಪರ್ವತವನ್ನು ಅದರ ಸ್ಥಳದಿಂದ ಸರಿಸುವನು ಶಕ್ತಿಯುಳ್ಳವನಲ್ಲ ಬದಲಾಗಿ ಗುಣಗಳನ್ನು ಮಾರ್ಪಾಡು ಮಾಡುವ ಶಕ್ತಿ ಹೊಂದಿದವನು ನಿಜವಾದ ಶಕ್ತಿವಂತನಾಗಿದ್ದಾನೆ ಆದ್ದರಿಂದ ನೆನಪಿಡಿರೀ ಎಲ್ಲಾ ಧೈರ್ಯದಿಂದ ಹಾಗೂ ಶಕ್ತಿಯಿಂದ ಗುಣಗಳನ್ನು ಮಾರ್ಪಾಡು ಮಾಡಲು ವ್ಯಯಮಾಡಿರಿ. ಏಕೆಂದರೆ ಇದುವೇ ನಿಜವಾದ ಶಕ್ತಿ ಹಾಗೂ ಶೌರ್ಯವಾಗಿದೆ.

**ಉನ್ನತವಾದ ನೈತಿಕತೆಯು ಬಹು ದೊಡ್ಡ ಪವಾಡವಾಗಿದೆ**

ಜಂಭ ಕಾರ್ಯಗಳ ಬಗ್ಗೆ ಯಾವುದಾದರು ರೀತಿಯಲ್ಲಿ ಜನರು ತನ್ನ ವಿವಶಿತೆಯನ್ನು ಪ್ರಸ್ತುತ ಪಡಿಸುತ್ತಾರೆ. ಮತ್ತು ಅದನ್ನು ಮಾಡಲು ಇಚ್ಛಿಸುವುದಿಲ್ಲ. ಆದರೆ ನೈತಿಕತೆಯು ಇಂತಹದೊಂದು ಪವಾಡವಾಗಿದೆ ಅದರ ಮೇಲೆ ಯಾರೂ ಬೊಟ್ಟು ತೋರಿಸುವುದಿಲ್ಲ. ಈ ಕಾರಣದಿಂದಲೇ ನಮ್ಮ ರಸೂಲಲುಲ್ಲಾಹ್ ಸಲ್ಲಲ್ಲಾಹು ಅಲೀಹಿವಸಲ್ಲಮರಿಗೆ ನೈತಿಕತೆಯಲ್ಲಿ ಮಹೋನ್ನತ ಶಕ್ತಿಯುತವಾದ ಪವಾಢ ನೀಡುವುದಾಗಿದೆ. ಅಲ್ಲಾಹನು ನುಡಿದಂತೆ **ಇನ್ನಕ ಲಲಾ ಖುಲುಖಿನ್ ಅಝೀಮ್** (ಅಲ್ ಖಲಮ್: 05) ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲರ ಪ್ರತಿಯೊಂದು ರೀತಿಯ ಪವಾಡಗಳು ಎಲ್ಲಾ ಪವಾಡಗಳಿಗಿಂತ ಮುಂದಾಗಿದ್ದರು ನೈತಿಕತೆಯ ಪವಾಡದಲ್ಲಿ ಅವರು ಸರ್ವಪ್ರಥಮರಾಗಿದ್ದರು, ಅದಾಹರಣೆಯು ಲೋಕದ ಇತಿಹಾಸದಲ್ಲಿಯೇ ಕಂಡುಬರುವುದಿಲ್ಲ ಮತ್ತು ಲೊಕವು ಪ್ರಸ್ತುತ ಪಡಿಸಲು ಸಾಧ್ಯವೂ ಇಲ್ಲ.

ನನ್ನ ವಿಚಾರದಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ಅವಗಣಗಳನ್ನು ಬಿಟ್ಟು ಕೆಡುಕು ಹವ್ಯಾಸಗಳನ್ನು ತೊರೆದು ಸದ್ಗುಣಗಳನ್ನು ಒಳಗೊಂಡರೆ ಅವನಿತೆ ಅದುವೇ ಪವಾಡವಾಗಿದೆ. ಉದಾಹರಣೆಗೆ ಕ್ರೂರಿ ಸ್ವಭಾವ ಹಾಗೂ ಕ್ರೋಧವನ್ನು ಬಿಟ್ಟು ಸಹಿಷ್ಣುತೆ ಹಾಗೂ ಕ್ಷಮಾಗುಣವನ್ನು ಅಳವಡಿಸಿಕೊಂಡರೆ ಅಥವಾ ಜಿಪುಣತನವನ್ನು ಬಿಟ್ಟು ಔದಾರ್ಯವಂತನಾದರೆ ಮತ್ತು ದ್ವೇಶದ ಬದಲಾಗಿ ಪ್ರೀತಿಯನ್ನು ತೋರಿಸಿದರೆ ನಿಸ್ಸಂಶಯವಾಗಿಯು ಪವಾಡವಾಗಿದೆ. ಹಾಗೆಯೇ ತನ್ನನ್ನು ಬದಲಾಯಿಸಿಕೊಳ್ಳುವ ಭಾವವನ್ನು ಬಿಟ್ಟು ವಿನಯತೆಯನ್ನು ಸ್ವಿಕರಿಸಿದರೆ ಅದುವೇ ಪವಾಡವಾಗಿದೆ. ಆದ್ದರಿಂದ ನಿಮ್ಮಲ್ಲಿ ಯಾರು ಅವನು ಪವಾಡವಂತನಾಗಲು ಬಯಸುವುದಿಲ್ಲ. ನಾನು ಬಲ್ಲೆನು ಪ್ರತಿಯೊಬ್ಬ ಇದನ್ನು ಬಯಸುತ್ತಾನೆ ಆದ್ದರಿಂದ ಮನುಷ್ಯನು ತನ್ನ ನೈತಿಕತೆಯನ್ನು ಸುಧಾರಿಸಿಕೊಂಡು ಸಧಾ ಕಾಲಕ್ಕಾಗಿ ಪವಾಡ ಪುರುಷನಾಗಬೇಕು. ಏಕೆಂದರೆ ಇದು ಎಂದೂ ಮಾಸದ ಪವಾಡವಾಗಿರುತ್ತದೆ ಮತ್ತು ಇದು ಪರಿಣಾಮಕಾರಿಯಾಗಿರುತ್ತದೆ. ಸತ್ಯವಿಶ್ವಾಸಿಯನ್ನು ತನ್ನ ಪರಿಪಾಲಕನಾದ ಅಲ್ಲಾಹನ ದೃಷ್ಟಿಯಲ್ಲಿ ಪವಾಡ ಪುರುಷನಂತಾಗಲು ಬಯಸಬೇಕು. ಹಲವು ಮದ್ಯವ್ಯಸನಗಳಿಗೆ ಹಾಗೂ ಐಶ್ವರ್ಯಮತರಿಗೆ ಯಾವುದೇ ಅರಂಭ ಹಾಗೂ ಪವಾಡಗಳನ್ನು ನಂಬುವಂತೆ ಕಾಣುವುದಿಲ್ಲ ಆದರೆ ಸಜ್ಜನತೆಯ ಮುಂದೆ ಅವರು ತಲೆ ಬಾಗುತ್ತಾರೆ ಮತ್ತು ಅದನ್ನು ಒಪ್ಪದೇ ಬೇರೆ ದಾರಿಯೇ ಇಲ್ಲ ಎಂದು ಭಾವಿಸುತ್ತಾರೆ. ಹಲವು ಜನರು ಸಜ್ಜನರ ಸತ್ಯತೆಯನ್ನು ಕಂಡು ಸತ್ಯವನ್ನು ಸ್ವಿಕರಿಸುವುದು ಕಂಡಿರಬಹುದು. (ಮಲ್‌ಫೂಝಾತ್ ಸಂಪುಟ-01, ಪುಟ-119-122, ಮುದ್ರಣ ಖಾದಿಯಾನ್ 2018)

*(ಪುಟ ಸಂಖ್ಯೆ 12ರ ವರದಿಯ ಉಳಿದ ಭಾಗ)*

ನೆಲೆಗೊಳ್ಳುವುದು. ಇಂದಿನ ಲೋಕವನ್ನು ನಾನು ಹೀಗೆ ನೋಡುತ್ತಿದ್ದೇನೆ. ನನ್ನ ಪ್ರಾರ್ಥನೆ ಏನೆಂದರೆ ಲೋಕವು ಹಿಂದಿನ ತಪ್ಪುಗಳನ್ನು ಪುನರಾವರ್ತಿಸಬಾರದು. ಬದಲಾಗಿ ಇತಿಹಾಸದಿಂದ ನಾವು ಪಾಠ ಕಲಿಯಬೇಕಾಗಿದೆ. ಆಗ ಮಾತ್ರ ನಾವು ತಮಗಾಗಿ ಹಾಗೂ ತಮ್ಮ ಮುಂದಿನ ಪೀಳಿಗೆಗಾಗಿ ಉತ್ತಮ ಭವಿಷ್ಯ ನಿರ್ಮಿಸ ಬಹುದಾಗಿದೆ.

ಹುಝೂರ್(ಅಬಿಅ) ಹೇಳಿದರು. ನಾವು ಪ್ರಥಮ ಜಾಗತಿಕ ಯುದ್ಧಗಳ ಪರಿಸ್ಥಿತಿಗಳನ್ನು ನೋಡಿದಾಗ, ಲೀಗ್ ಆಫ್ ನೇಷನ್ಸ್ (League of Nations) ಅಸ್ಥಿತ್ವಕ್ಕೆ ಬಂದಿತ್ತು. ಆದರೆ ಅದು ಬೇಕಾದ ಉದ್ದೇಶ ಈಡೇರಿಸದೆ ಸಂಪೂರ್ಣ ನೆಲ ಕಚ್ಚಿತು. ಇದರ ವೈಫಲ್ಯದ ಕಾರಣ ನ್ಯಾಯ ಮತ್ತು ಪಕ್ಷಪಾತ ರಹಿತ ತತ್ವಗಳನ್ನು ಪಾಲಿಸಲಿಲ್ಲ. ಬದಲಾಗಿ ಮಿತ್ರತನ ಮತ್ತು ಗುಂಪುಗಾರಿಕೆಗಳು ಬಂದಿದ್ದವು. ಕೆಲವು ಸಮುದಾಯ ದೇಶಗಳೊಡನೆ ಅನುಚಿತವಾಗಿ ವರ್ತಿಸಲಾಯಿತು. ಮತ್ತು ಅವರ ಸ್ಥಾನಮಾನವನ್ನು ಕಡೆಗಣಿಸಲಾಯಿತು. ಅದರ ಪರಿಣಾಮವಾಗಿ ಅತಿ ಶೀಘ್ರದಲ್ಲಿ ಮಾನವ ಇತಿಹಾಸದಲ್ಲಿ ಅತಿ ಭಯಂಕರವಾದ ಯುದ್ಧ ಅರ್ಥಾತ್ ಎರಡನೆ ಜಾಗತಿಕ ಯುದ್ಧ ಪ್ರಾರಂಭವಾಯಿತು. ಅಂತಹ ಆರು ವರ್ಷಗಳ ವಿನಾಶಕಾರಿ ಹಾಗೂ ವಚನಕಾರಿಯ ನಂತರ ಯುದ್ಧ ಅಂತ್ಯಗೊಂಡಿತು. ಆಗ ಲೋಕದಲ್ಲಿ ಶಾಂತಿಯ ರಕ್ಷಣೆಗಾಗಿ ಹಾಗೂ ಶಾಂತಿಯ ಸ್ಥಾಪನೆಗಾಗಿ ಸಂಯುಕ್ತ ರಾಷ್ಟ್ರ ಸಂಘಟನೆ (U.N.O) ಕಟ್ಟಲಾಯಿತು. ಆದರೆ ಸಂಯುಕ್ತ ರಾಷ್ಟ್ರ ಸಂಘಟನೆಗಳು ಉದ್ದೇಶಿತ ಗುರಿ ಪಡೆಯುವುದರಲ್ಲಿ ವಿಫಲಗೊಂಡಿದೆ. ಇಂದು ಮತ್ತೊಮ್ಮೆ ಗುಂಪುಗಾರಿಕೆ ಪ್ರಾರಂಭವಾಗಿದೆ. ಸಮಾಜ ಒಡಕಿನತ್ತ ಸಾಗಿದೆ ಮತ್ತು ಸಮುದಾಯಗಳ ನಡುವೆ ಬಿರುಕು ಕಾಣತೊಡಗಿವೆ. ಹಲವು ಮುಸ್ಲಿಮ್ ಮತ್ತು ಅಮುಸ್ಲಿಮ್ ರಾಷ್ಟ್ರಗಳು ಶಾಂತಿಯ ವಾಸ್ತವ ರೂಪ ಗ್ರಹಿಸುತ್ತಿಲ್ಲ ಮತ್ತು ಬರಬಹುದಾದ ಆತಂಕ ಅಪಾಯಗಳಿಂದ ಅಜ್ಞಾನ ಹೊಂದಿದ್ದಾರೆ.

ಹುಝೂರ್(ಅಬಿಅ) ನುಡಿದರು. ಖಂಡಿತವಾಗಿ ಈಗ ಆಗುವಂತಹ ಯುದ್ಧಗಳ ಪರಿಣಾಮ ಆ ಯುದ್ಧಗಳಿಂದ ಅತಿ ಹೆಚ್ಚು ಎಂದೂ ಕಂಡರಿಯದಂತಹ ಭಯಂಕರವಾಗುವುದು. ಏಕೆಂದರೆ ಹಲವು ದೇಶಗಳು ಪರಮಾಣು ಆಯುಧಗಳನ್ನು ಹೊಂದಿದೆ. ಇವುಗಳಲ್ಲಿ ಒಂದು ದೇಶವು ಸಹ ಈ ವಿನಾಶಕಾರಕ ಫಲಗಳನ್ನು ಅನುಭವಿಸಲು ಬಿಡುವರು. ಪರಮಾಣು ಯುದ್ಧ ಪ್ರಾರಂಭವಾದರೆ ಪೀಳಿಗೆಯಿಂದ ಪೀಳಿಗೆಯವರೆಗೆ ಮಾನಸಿಕ ಅಸ್ವಸ್ಥ ಹಾಗೂ ದೈಹಿಕ ಅಂಗವಿಕಲತೆ ಹೊಂದುವ ಮಕ್ಕಳು ಜನ್ಮ ತಾಳುವರು. ಹೀಗೆ ಅವರು ತಮ್ಮ ದೇಶಕ್ಕೆ ಸೇವೆ ಸಲ್ಲಿಸುವ ಬದಲಾಗಿ ದೇಶಕ್ಕೆ ಕಂಟಕರಾಗಿ ಜೀವಿಸುವರು. ಮತ್ತು ಸಮಾಜಕ್ಕೆ ಭಾರವಾಗಿ ಜೀವಿಸುವರು. ಅವರ ಮನೆಗಳು ಸೂತಕ ವಹಿಸುವುದು. ಅವರ ಕ್ಷೇತ್ರಗಳು ದುಃಖ ಭರಿತವಾಗುವುದು ಮತ್ತು ಆ ಸಮುದಾಯಗಳು ಕಷ್ಟ ಕಾರ್ಪಣ್ಯಗಳಿಗೆ ಗುರಿಯಾಗುವುದು. ನಮ್ಮ ಮುರ್ಖತನ ಮತ್ತು ಸ್ವಾರ್ಥದಿಂದಾಗಿ ಆಗುವ ಯುದ್ಧಗಳಿಗಾಗಿ ಅವರು ನಮ್ಮ ಮೇಲೆ ಶಾಪ ಹಾಕುವರು. ಅದಕ್ಕೆ ಅವರು ಅರ್ಹರು. ಏಕೆಂದರೆ ಈ ಯುದ್ಧಗಳು ಅವರು ಜನ್ಮ ನೀಡುವ ಮೊದಲೇ ಅವರ ಕನಸುಗಳನ್ನು ಹಿಚುಕಿ ಹಾಕಿವೆ. ಆದ್ದರಿಂದ ಯಾರು ಈ ಯೋಚನೆಯಲ್ಲಿರಬಾರದು. ನಾವು ಎದುರಿಸುತ್ತಿರುವ ಪರಿಸರ ಸಮಸ್ಯೆಗಳು ಸಮಾನ್ಯವಾಗಿದೆ ಎಂದು. ನಾವು ನಮ್ಮ ವರ್ತನೆಗಳನ್ನು ಬದಲಾಯಿಸಿಕೊಳ್ಳದೇ ಈ ಪರಿಸರ ಬದಲಾಗಬಹುದೆಂಬ ಯೋಚನೆ ಬಿಡಿರಿ.

ಹುಝೂರ್(ಅಬಿಅ) ನುಡಿದರು. ಇದಲ್ಲದೇ ಲೋಕದಲ್ಲಿ ಶಾಂತಿ ರಕ್ಷಣೆ ಹದಗೆಡಲು ಇಸ್ಲಾಮಿನ ಮೇಲೆ ಅಪವಾದ ಹೊರೆಸುತ್ತಿದ್ದರೆ ಈ ಅಸ್ಥಿರತೆಯ ಸಂಕಟ ಇನ್ನೂ ಹೆಚ್ಚಾಗುವುದು. ಯಾವುದೇ ಧರ್ಮ ಅಥವಾ ಅದರ ಅನುಯಾಯಿಗಳ ಮೇಲೆ ಆಕ್ರಮಣ ಮಾಡಿದರೆ ವಿಭಜನೆ ಇನ್ನೂ ಹೆಚ್ಚಳವಾಗುವುದು. ಇದರಿಂದ ಉಗ್ರವಾದಿಗಳಿಗೆ ಬಲ ಬರುವುದು. ಆದ್ದರಿಂದ ಎಲ್ಲ ವರ್ಗ ಮತ್ತು ವಿಶ್ವಾಸಗಳ ಮಧ್ಯೆ ದ್ವೇಷಾಗ್ನಿ ಹರಡಲು ಹೆಚ್ಚು ಪ್ರಯತ್ನಶೀಲರಾಗುವರು.

ಹುಝೂರ್(ಅಬಿಅ) ಹೇಳಿದರು. ನಾನು ಸ್ಪಷ್ಟವಾಗಿ ಹೇಳಿದಂತೆ ಮುಸ್ಲಿಂ ರಾಷ್ಟ್ರಗಳು ಅಥವಾ ಉಗ್ರವಾದಿ ಗುಂಪುಗಳು ಇಸ್ಲಾಮ್ ಧರ್ಮದ ಹೆಸರಿನಲ್ಲಿ

ದೌರ್ಜನ್ಯ ಮಾಡಲು ಕಾರಣವೇನೆಂದರೆ ಅವರು ಅದರ ಶಿಕ್ಷಣದಿಂದ ಪ್ರತ್ಯೇಗೊಂಡಿದ್ದಾರೆ. ಕೇವಲ ವೈಯಕ್ತಿಕ ಲಾಭಗಳನ್ನು ಪಡೆಯ ಬಯಸುತ್ತಾರೆ. ಇಂದಿನ ಸಮಸ್ಯೆಗಳಿಗೆ ಮತ್ತು ಯುದ್ಧಗಳಿಗೆ ಧರ್ಮದಿಂದ ಯಾವುದೇ ಸಂಬಂಧವಿಲ್ಲ. ಬದಲಾಗಿ ಇದು ಕೇವಲ ಸಂಪತ್ತು, ಬಲ ಮತ್ತು ಭೌಗೋಳಿಕ ಜಯ ಸಾಧಿಸುವ ಉದ್ದೇಶ ಹೊಂದಿವೆ.

ಹುಝೂರ್(ಅಬಿಅ) ಹೇಳಿದರು. ಈ ಪರಿಸ್ಥಿತಿಗಳನ್ನು ಮನಗಾಣುತ್ತ ನನ್ನ ಹೃದಯಾಂತರದ ಪ್ರಾರ್ಥನೆ ಏನೆಂದರೆ. ಅಲ್ಲಾಹನು ಈ ಲೋಕವನ್ನು ಸಾಮೂಹಿಕ ಹಿತ ಮನದಲ್ಲಿಟ್ಟು ಒಗ್ಗೂಡಿಸುವಂತೆ, ಪರಸ್ಪರ ಭರವಸೆ ಮತ್ತು ಸೌಹಾರ್ಧತೆ ಬೆಳೆಸುವಂತೆ ದಯಪಾಲಿಸಿರಿ. ಬನ್ನಿ ನಾವೆಲ್ಲ ಧರ್ಮದ ಮೇಲೆ ಆರೋಪ ಹಚ್ಚುವ ಬದಲು ಅಥವಾ ಒಬ್ಬರು ಇನ್ನೊಬ್ಬರ ಮೇಲೆ ಬೆರಳೆತ್ತುವ ಬದಲು ಒಗ್ಗೂಡಿ ತಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳಿಂದ ಶಾಂತಿಯನ್ನು ಸ್ಥಾಪಿಸಲು ವ್ಯಯ ಮಾಡುವಂತಾಗಲಿ ಮತ್ತು ತಮ್ಮ ಮುಂದಿನ ಪೀಳಿಗೆಗೋಸ್ಕರ ಸುರಕ್ಷಿತ ಭವಿಷ್ಯ ಬಿಟ್ಟು ಹೋಗುವಂತಾಗಲಿ. ನಮ್ಮ ಮುಂದಿನ ಪೀಳಿಗೆಗಳು ನಮಗೆ ದ್ವೇಷ ಮತ್ತು ಕ್ರೋಧದಿಂದಲ್ಲ. ಬದಲಾಗಿ ಪ್ರೀತಿ ಮತ್ತು ಸ್ನೇಹದಿಂದ ನೆನೆಯುವಂತಾಗಲಿ. ಅಲ್ಲಾಹನು ನಮ್ಮ ಎಲ್ಲಾ ಜನರನ್ನು, ಎಲ್ಲಾ ಸಮುದಾಯಗಳನ್ನು, ಪರಸ್ಪರ ಹಕ್ಕುಗಳನ್ನು ಪಾಲಿಸುವವರನ್ನಾಗಿ ಮಾಡಲಿ. ಅಲ್ಲಾಹನು ಪ್ರತಿ ವಿಧದ ಅನ್ಯಾಯ ಹಾಗೂ ಸಮಸ್ಯೆಗಳ ಮೇಲೆ ಸ್ನೇಹ ಮತ್ತು ನ್ಯಾಯವನ್ನು ಆಧಿಪತ್ಯ ವಹಿಸುವಂತೆ ಮಾಡಲಿ.

ಈ ಪದಗಳೊಂದಿಗೆ ನಾನು ಮಗದೊಮ್ಮೆ ನಿಮಗೆಲ್ಲರಿಗು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನೀವೆಲ್ಲರೂ ಇಲ್ಲಿ ಆಗಮಿಸಿದ್ದೀರಿ. ಅನಂತ ಧನ್ಯವಾದಗಳು.

ಸಂಬೋಧನೆಯ ಕೊನೆಯಲ್ಲಿ ಹುಝೂರ್(ಅಬಿಅ) ದುಆ ಮಾಡಿಸಿದರು. ಅದರಲ್ಲಿ ಎಲ್ಲಾ ಅತಿಥಿಗಳು ತಮ್ಮ ತಮ್ಮ ರೀತಿಯಲ್ಲಿ ಭಾಗವಹಿಸಿದ್ದರು. ಹುಝೂರ್(ಅಬಿಅ) ರವರ ಈ ಸಂಬೋಧನೆ 07:22 ಗಂಟೆಯವರೆಗೆ ಜಾರಿಯಲ್ಲಿತ್ತು.

**ರೀವ್‌ಯೂ ಆಫ್ ರಿಲಿಜಿಯಸ್ ಪತ್ರಿಕೆಯ ಫ್ರೆಂಚ್ ಎಡಿಷನ್ನಿನ ವೆಬ್‌ಸೈಟ್ ಚಾಲನೆ**

ಅನಂತರ ಕಾರ್ಯಕ್ರಮದನ್ವಯ ಹುಝೂರ್(ಅಬಿಅ) ರಿವ್‌ಯೂ ಆಫ್ ರಿಲಿಜಿಯಸ್ ಪತ್ರಿಕೆಯ ಫ್ರೆಂಚ್ ಎಡಿಶನ್ನಿನ ವೆಬ್‌ಸೈಟ್ ಚಾಲನೆಗೆ ತಂದರು. ಈಗ ಈ ಪತ್ರಿಕೆಯ ಫ್ರೆಂಚ್ ಎಡಿಶನ್ ಜೊತೆ ಜೊತೆಯಲ್ಲಿ ಇದರ Internet Addtion ಸಹ ಲಭ್ಯವಾಗುವುದು. ಹೀಗೆ ಇನ್‌ಶಾಅಲ್ಲಾಹ್ ಈ ಪತ್ರಿಕೆಯ ಮುಖಾಂತರ ಫ್ರೆಂಚ್ ಭಾಷಿಕ ಕೋಟ್ಯಾಂತರ ಜನರಿಗೆ ಇಸ್ಲಾಮ್ ಧರ್ಮದ ವಾಸ್ತವ ಶಿಕ್ಷಣವು (ಸಂದೇಶ) ತಲುಪುವಂತಾಗುವುದು.

ಈ ಅನುಗ್ರಹಿತ ಪತ್ರಿಕೆಯನ್ನು ಹಝ್ರತ್ ಅಕ್‌ದಸ್ ಮಸೀಹ್ ಮೌಊದ್(ಅ) ರು 1902 ರಲ್ಲಿ ಪಾಶ್ಚಿಮಾತ್ಯ ಲೋಕಕ್ಕೆ ಇಸ್ಲಾಮ್ ಧರ್ಮದ ಪೂರ್ಣ ಮತ್ತು ವಾಸ್ತವ ಶಿಕ್ಷಣ ಪರಿಚಯಿಸಲು ಜಾರಿಗೆ ತಂದಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ರವರ ಕಾಲದಲ್ಲಿಯೇ ಈ ಪತ್ರಿಕೆಯು ಎಷ್ಟೊಂದು ಹೆಸರುವಾಸಿಯಾಗಿತ್ತೆಂದರೆ ಪಶ್ಚಿಮದ ಪತ್ರಿಕೆಗಳು ಹಾಗೂ ವಿದ್ಯಾವಂತ ವರ್ಗ ಇದರ ಕುರಿತು ಮೆಚ್ಚುಗೆಯ ಅನಿಸಿಕೆಗಳನ್ನು ಪ್ರಸ್ತುತಪಡಿಸುತ್ತಿದ್ದರು.

ಇದೀಗ ಈ ಪತ್ರಿಕೆ ನಾಲ್ಕು ಭಾಷೆಗಳಲ್ಲಿ ಇಂಗ್ಲೀಷ್ (ಮಾಸಿಕ) ಜರ್ಮನ್ (ತ್ರೈಮಾಸಿಕ) ಫ್ರೆಂಚ್ (ತ್ರೈಮಾಸಿಕ) ಸ್ಪಾನಿಷ್ (ತ್ರೈಮಾಸಿಕ) ಪ್ರಕಟಗೊಳ್ಳುತ್ತದೆ. ಫ್ರೆಂಚ್ ಎಡಿಷನ್ ಹಿಂದಿನ ಎರಡು ವರ್ಷಗಳಿಂದ ಲಭ್ಯವಿತ್ತು. ಆದರೆ ಈಗ Internet ಮೂಲಕ ಬಹುಸಂಖ್ಯಾತರಿಗೆ ಇಸ್ಲಾಂ ಧರ್ಮದ ವಾಸ್ತವ ಶಿಕ್ಷಣ ತಲುಪಲು ಸಕ್ಷಮವಾಗುವುದು. ಇನ್‌ಶಾಲ್ಲಾಹ್.

ತದನಂತರ ಹುಝೂರ್(ಅಬಿಅ) ಮಾರ್ಕಿನಿಂದ ಹೊರ ಬಂದರು ಮತ್ತು Humunity first ಕಚೇರಿಗೆ ಪ್ರವೇಶಿಸಿದರು. ಈ ವಿಭಾಗ ಜಲ್ಸಾ ಸಂದರ್ಭದಲ್ಲಿ ತಮ್ಮ ಒಂದು ಕಚೇರಿ ಸ್ಥಾಪಿಸಿತ್ತು. ಅದರಲ್ಲಿ ಈ ವಿಭಾಗದಿಂದ ಆಗುವ ಕಾರ್ಯಗಳ ಚಿತ್ರ ಹಾಗೂ ಬರಹಗಳ ಮೂಲಕ ಪ್ರದರ್ಶಿಸಲಾಗಿತ್ತು. ಹುಝೂರ್(ಅಬಿಅ) ಅದನ್ನು ಪರೀಕ್ಷಿಸಿದರು ಮತ್ತು ಕೆಲ ಕಾರ್ಯಗಳ ಕುರಿತು ಸಲಹೆ ನೀಡಿದರು.

ಇಂದಿನ ಈ ಸಮಾರಂಭದಲ್ಲಿ Francophone ದೇಶಗಳಿಂದ ಸಂಬಂಧಿಸಿದ 75 ಅತಿಥಿಗಳು ಭಾಗವಹಿಸಿದ್ದರು. ಅದಲ್ಲದೇ ಈ ದೇಶಗಳಿಗೆ ಸಂಬಂಧಿಸಿದ ನೌಮಬಾಯೆನ್ (ನವ ಅಹ್ಮದಿಗಳು) ಸಹ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಒಂದು ಪ್ರತ್ಯೇಕ ಮಾರ್ಕಿಯಲ್ಲಿ ಈ ಅತಿಥಿಗಳಿಗೆ ಸಂಜೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದನ್ವಯ ಹುಝೂರ್(ಅಬಿಅ) ಈ ಮಾರ್ಕಿಗೆ ಆಗಮಿಸಿದರು. ಅಲ್ಲಿ ಈ ಅತಿಥಿಗಳು ಹುಝೂರ್(ಅಬಿಅ) ರೊಂದಿಗೆ ಊಟ ಮಾಡುವ ಸೌಭಾಗ್ಯ ಪಡೆದರು.

ಊಟ ಆದ ನಂತರ ಅತಿಥಿಗಳು ಸರತಿಯಂತೆ ಹುಝೂರ್(ಅಬಿಅ) ರನ್ನು ಭೇಟಿಯಾಗುವ ಭಾಗ್ಯ ಪಡೆದರು. ಅತಿಥಿಗಳು ಸರತಿಯಂತೆ ಹುಝೂರ್‌ರ ಬಳಿ ಬರುತ್ತಿದ್ದರು. ಹುಝೂರ್ ಅನುಗ್ರಹಪೂರ್ವಕವಾಗಿ ಅವರೊಡನೆ ಮಾತನಾಡುತ್ತಿದ್ದರು.

ಅತಿಥಿಗಳು ಹುಝೂರ್(ಅಬಿಅ) ರೊಂದಿಗೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಅನಂತರ ಹುಝೂರ್(ಅಬಿಅ) ಕೆಲ ಸಮಯಕ್ಕಾಗಿ ತಮ್ಮ ವಸತಿನಿಲಯಕ್ಕೆ ತೆರಳಿದರು. 8 ಗಂಟೆ 50 ನಿಮಿಷಕ್ಕೆ ಅವರು ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿ ಮಗ್ರೀಬ್, ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

**5 ಅಕ್ಟೋಬರ್ 2019 (ಶನಿವಾರ)**

**ಅತಿಥಿಗಳ ಅನಿಸಿಕೆಗಳು**

ಹುಝೂರ್(ಅತಬ)ರವರು ಇಂದಿನ ಭಾಷಣವು ಮುಸ್ಲಿಮೇತರತ ಹಾಗೂ ಅಹ್ಮದಿಯೇತರರ ಅತಿಥಿಗಳ ಮೇಲೆ ಗಾಢವಾದ ಪ್ರಭಾವ ಬೀರಿದೆ, ಕೆಲ ಅತಿಥಿಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸದೆ ಇರಲಿಲ್ಲ.

- ಈ ಕ್ಷೇತ್ರದ ಮೇಯರ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೇಳಿದರು: ಬುಧವಾರ ದಿವಸ ನಾನು ಖಲೀಫತುಲ್ ಮಸೀಹ್ ಅವರನ್ನು ಬರಮಾಡಿಕೊಳ್ಳಲು ಇಲ್ಲಿಗೆ ಬಂದಿದ್ದೆ ಅವರ ಮಾತು ನನಗೆ ಅತ್ಯಂತ ಪರಿಣಾಮ ಬೀರಿದ್ದು ಇದಾಗಿತ್ತು: ಖಲೀಫತುಲ್ ಮಸೀಹ್ ಅತ್ಯಂತ ಸಂವೇದನಶೀಲರಾಗಿದ್ದಾರೆ. ಇಂದು ಲೋಕವು ಮೋಹದ ಹಿಂದೆ ಓಸುತ್ತಿದೆ. ರಾಜಕೀಯ ಪ್ರಮುಖರಾಗಲಿ, ಧಾರ್ಮಿಕ ಮುಖಂಡರಾಗಿರಲಿ ಎಲ್ಲರೂ ಅಶಾಂತತೆಯಲ್ಲಿದ್ದಾರೆ ಆದರೆ ಖಲೀಫತುಲ್ ಮಸೀಹ್ ಅತಿದೀರ್ಘವಾದ ಪ್ರಯಾಣ ಮಾಡಿ ಬಂದರೂ ಶಾಂತಚಿತ್ತರಾಗಿದ್ದರು ಮುಗುಳ್ನಗುತ್ತಿದ್ದರು.
- ಓರ್ವ ಮಹಿಳೆ ಅತಿಥಿ Alfonsina Bellio ಸಾಹೇಬ ಅವರು ಮಯತ್ತಿಯಲ್ಲಿ Anthropologist ಆಗಿದ್ದಾರೆ ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿದರು. ನಾನು ಖಲೀಫತುಲ್ ಮಸೀಹ್ ಅವರ ಭಾಷಣದಿಂದ ತುಂಬ ಪ್ರಭಾವಿತನಾಗಿದ್ದೇನೆ. ಖಲೀಫರು ಈ ಮಾತನ್ನು ಹೇಳಿದಾಗ: ಫ್ರಾನ್ಸ್‌ನಲ್ಲಿ ಆದ ಆಕ್ರಮಣವನ್ನು ನಾವು ಖಂಡಿಸುತ್ತೇವೆ. ಅವರು ಸ್ಪಷ್ಟಪಡಿಸಿದರು ಈ ಆಕ್ರಮಣಗಳಿಂದ ಇಸ್ಲಾಮ್ ಧರ್ಮಕ್ಕೆ ಯಾವುದೇ ಸಂಬಂಧವಿಲ್ಲ. ಖಲೀಫತುಲ್ ಮಸೀಹ್ ಶಾಂತಿಪ್ರೀಯರು ಉದಾರ ಮನಸ್ಸುಳ್ಳವರು ಹಾಗೂ ಸಮಾನತೆ ಬಯಸುವರಾಗಿದ್ದಾರೆ. ಅವರು ಇಸ್ಲಾಮಿನ ವಾಜ್ತವ ಚಿತ್ರಣವನ್ನು ಪ್ರಸ್ತಾಪಿಸಿದ್ದಾರೆ. ಇದರಿಂದ ತಿಳಿಯಬಹುದು ಮುಸ್ಲಿಮರು ಸುಲಭವಾಗಿ ಪಾಶ್ಚಿಮಾತ್ಯರೊಡನೆ ಕೂಡಬಹುದು. ಪಶ್ಚಿಮ ಲೋಕದಲ್ಲಿ ಇಸ್ಲಾಮ್ ಧರ್ಮಕ್ಕೆ ಯಾವ ಸ್ಥಾನವೂ ಇಲ್ಲ. ಮುಸ್ಲಿಮರು ಪರಸ್ಪರ ಕೂಡಿ ಇರಲು ಸಾಧ್ಯವಿಲ್ಲ ಎಂದು ಹೇಳುವವರು ಇದ್ದಾರೆ. ಇಂತಹ ಜನರಿಗೆ ಇಂದನ ಭಾಷಣ ಕೇಳಬೇಕಾಗಿತ್ತು.
- ಓರ್ವ ಅಹ್ಮದೀಯೇತರು ಮುರ್ತಝಾ ಸಾಹೆಬ್ ಅವರು ಇರಾನ್ ದೇಶದವರಾಗಿದ್ದರು ಅವರು ತನ್ನ ಭಾವನೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ: ಅಹ್ಮದಿಯಾ ಸಮೂದಾಯ ಹಾಗೂ ಖಲೀಫತುಲ್ ಮಸೀಹ್ ಅವರ ಸ್ಥಾನಮಾನ ಕುರಿತು ನನಗೆ ಇಂದು ಪ್ರಥಮ ಬಾರಿಗೆ ಮಾಹಿತಿ ದೊರಕಿದೆ. ಜನರು ಇಸ್ಲಾಮ್ ಧರ್ಮದ ಪ್ರತಿ ತುಂಬ ವಿರೋಧಾತ್ಮಕ ಪ್ರಚಾರ ಮಾಡುತ್ತಾರೆ. ತಮ್ಮ ಖಲೀಫರು ಇಂದು ತಕ್ಕುದಾದ ಉತ್ತರ ನೀಡಿದ್ದಾರೆ. ಮುಸ್ಲಿಮರ ಸ್ಥಿತಿ ಇಂದು ಹೇಗಿದೆ ಅವರಿಗೆ ತಮ್ಮ ವಿಶ್ವಾಸಗಳ ಮೇಲೆ ತಮ್ಮ ಧರ್ಮದ ಬಗೆಯೇ ಜ್ಞಾನ ಇಲ್ಲ. ಅವರಿಗೆ ತಮ್ಮ ಖಲೀಫರಿಂದ ಇಸ್ಲಾಮ್ ಕಲಿಯಬೇಕಾಗಿದೆ. ಖಲೀಫರು ಇಂದು ಸ್ಪಷ್ಟ ಪಡಿಸಿದರು ಜಿಹಾದಿನ ವಾಸ್ತವ ಏನು ಮತ್ತು ಯಾವ ರೀತಿ ಅದನ್ನು ಅಪಾರ್ಥ ಮಾಡುತ್ತಿದ್ದಾರೆ. ಖಲೀಫರು ಇಸ್ಲಾಮ್ ಧರ್ಮದ ಪ್ರಾಥಮಿಕ ಹಂತದ ದೃಷ್ಟಾಂತಗಳು ಮತ್ತು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಎದುರಿಸಿದ ಘಟನೆಗಳು ಪ್ರಸ್ತುತಪಡಿಸಿದರು. ಅದರಿಂದ ಇಸ್ಲಾಮ್ ಧರ್ಮವು ಒಂದು ಶಾಂತಿ ಪ್ರೀಯ ಧರ್ಮವಾಗಿದೆ ಎಂದು ಸಾಬೀತಾಗುತ್ತದೆ.

ನಾನು ನನ್ನ ಜೀವನದಲ್ಲಿ ಪ್ರಥಮ ಬಾರಿಗೆ ಇಂತಹ ವಿವೇಕಶೀಲ ಭಾಷಣ ಕೇಳಿರುತ್ತೇನೆ.

- ಮರಾಕಶ್‌ನಿಂದ ಓರ್ವ ಅಹ್ಮದೀಯೇತರು ಅಹ್ಮದಿಯೇತರ ಅತಿಥಿ ಸುಫಿಯಾನ್ ಸಾಹಿಬ್ ಹೇಳುತ್ತಾರೆ: ನನಗೆ ಇಂದು ಖಲೀಫತುಲ್ ಮಸೀಹ್ ಅವರ ಭಾಷಣದಿಂದ ತಿಳಿದುಬಂತು ನೀವೇ ವಾಸ್ತವ ಹಾಗೂ ನಿಜವಾದ ಮುಸ್ಲಿಮ್ ಆಗಿದ್ದೀರಿ. ನೀವು ಮುಸ್ಲಿಮರಲ್ಲಿ ಎಂದು ಹೇಳುವ ಜನರು ಅಪ್ಪಟ ಸುಳ್ಳು ಹೇಳುತ್ತಿದ್ದಾರೆ. ಮೌಲವಿಗಳು ನನಗೆ ಬಾಲ್ಯದಿಂದ ಅಹ್ಮದಿಯರ ಬಗ್ಗೆ ಹೇಳಿದ್ದೆಲ್ಲ ಸುಳ್ಳಾಗಿದೆ. ಫ್ರಾನ್ಸಿನಲ್ಲಿ ಜನರು ಇಸ್ಲಾಮ್ ಧರ್ಮದಿಂದ ಮುಸಲ್ಮಾನರಿಂದ ಹೆದರುತ್ತಾರೆ, ಯಾವ ರೀತಿ ರಕ್ಷಣೆ ಮಾಡಿಕೊಳ್ಳಬೇಕುಎಂಬುದು ನನಗೆ ತಿಳಿದಿರಲಿಲ್ಲ. ಇಂದುಖಲೀಫತುಲ್ ಮಸೀಹ್ ಅತ್ಯಂತ ಉತ್ತಮ ರೀತಿಯಲ್ಲಿ ರಕ್ಷಣಾತ್ಮಕ ಧೇರಣೆವಹಿಸಿದ್ದಾರೆ.
- ಓರ್ವ ಕ್ರೈಸ್ತ ಅತಿಥಿ Jacob ಸಾಹೆಬ್ ತಮ್ಮ ಭಾವನೆಗಳನ್ನು ಹೀಗೆ ಬಹಿರಂಗಪಡಿಸಿದರು: ಲೋಕಕ್ಕೆ ಇಂತಹ ಕಾರ್ಯಕ್ರಮಗಳ ಅವಶ್ಯಕತೆ ತುಂಬ ಇದೆ. ನಿಮ್ಮ ಖಲೀಫರ ವಿವಿಧ ಸಮುದಾಯಗಳ ನಡವೆ, ವಿವಿಧ ಧರ್ಮಗಳ ನಡುವೆ ಗೋಡೆಯನ್ನು ಕೆಡುವಿ ಹಾಕುತ್ತಿದ್ದಾರೆ. ಅವರು ನಮಗೆ ಉಪದೇಶಿಸಿದರು ಉಗ್ರವಾದಕ್ಕೆ ರಾಜಕೀಯ ಉದ್ದೇಶಗಳಿರುತ್ತವೆ. ಧರ್ಮವು ಒಂದು ಉತ್ತಮ ವಸ್ತು ಆಗಿದೆ. ಧರ್ಮದಿಂದ ಮಾತನ್ನಾಡಿದರೆ ಫ್ರಾನ್ಸಿನ ಜನರಿಗೆ ಇದು ಹೇಸತನದ ಮಾತಾಗಿದೆ. ಫ್ರಾನ್ಸಿನ ಜನರಲ್ಲಿ ಇಸ್ಲಾಮ್ ಕುರಿತು ಒಂದು ಬೇರೆಯೇ ಯೋಚನೆ ಇದೆ.
- ಮತ್ತೋರ್ವ ಅತಿಥಿ Maxime Anfiray ಸಾಹೆಬ್ Thinktankನಲ್ಲಿ ಕಾರ್ಯ ನಿರ್ವಹಿಸುತ್ತಾರೆ ಅವರು ಹೇಳುತ್ತಾರೆ: ಇಂದು ನನ್ನ ಬಹು ಪ್ರೀಯವಾದ ದಿನವಾಗಿದೆ. ಇಂದು ನಾನು ಖಲೀಫತುಲ್ ಮಸೀಹರನ್ನು ನೇರವಾಗಿ ಕೇಳಿದ್ದೇನೆ ಮತ್ತು ನೋಡಿದ್ದೇನೆ. ನಿಮ್ಮ ಖಲೀಫರು ನಿಜಹೇಳಿದ್ದಾರೆ ಇಂದು ನಾವು ಅಂಧಾಕಾರದಲ್ಲಿ ದ್ವೇಷಭರಿತ ಕಾಲದಿಂದ ನಡೆಯುತ್ತಿದ್ದೇವೆ ಆದರೆ ಅದರ ಜೊತೆಯಲ್ಲಿ ಇದನ್ನೂ ನಿಮಗೆ ತಿಳಿಯ ಪಡಿಸಿದರು ಇದೆಲ್ಲ ಧರ್ಮದ ಕಾರಣದಿಂದ ಆದದ್ದಲ್ಲ. ಜನರಿಗೆ ಇಸ್ಲಾಮ್ ಧರ್ಮದಿಂದ ಹೆದರುವ ಅವಶ್ಯಕತೆ ಇಲ್ಲ. ಖಲೀಫರ ಹೇಳಿದ ಮಾತು ಧರ್ಮವನ್ನು ಉಗ್ರವಾದಿ ಜನರು Hijack ಮಾಡಿಕೊಂಡಿದ್ದಾರೆ ಅವರು ತಮ್ಮ ರಾಜಕೀಯ ಉದ್ದೇಶಗಳಿಗಾಗಿ ಬಳಸುತ್ತಿದ್ದಾರೆ ಎನ್ನುವುದು ಅಕ್ಷರಶಃ ಸರಿಯಾಗಿದೆ ನಾನು ಇದರಿಂದ ಸಹಮತ ಹೊಂದಿರುತ್ತೇನೆ.

ಅತಿಥಿಗಳು ಹುಝೂರ್(ಅತಬಿ) ಜೊತೆಯಲ್ಲಿ ಊಟ ಮಾಡಿದ ನಂತರ ಫೋಟೊ ತೆಗೆಸಿಕೊಳ್ಳುತ್ತಿದ್ದರು. ಆಗ ಕೋರಿಯಾದ ಓರ್ವ ಮಹಿಳೆಯು ಫೋಟೊ ತೆಗೆಸಲು ಮನವಿ ಮಾಡಿಕೊಂಡರು. ಆ ಮಹಿಳೆಯರು ಏನು ಹೇಳುವ ಮೊದಲೆ ಹುಝೂರ್ ಕೇಳಿದರು ತಾವು ಕೋರಿಯಾದವರೇ ಎಂದು ಅದಕ್ಕೆ ಆ ಮಹಿಳೆ ಆಶ್ಚರ್ಯಖಚಿತಳಾಗಿ ಕೇಳಿದಳು ಹುಝೂರ್ ನಿಮಗೆ ಹೇಗೆ ಗೊತ್ತಾಯಿತು ಎಂದು. ಅನಂತರ ಅವಳು ಸುಸಂಸ್ಕೃತ ರೀತಿಯಲ್ಲಿ ಕೈ ಜೋಡಿಸಿ ಬಗ್ಗಿ ಹೇಳಿದಳು ಹೌದು ನಾನು ಕೋರಿಯಾದನಳಾಗಿದ್ದೇನೆ ನಂತರ ಫೋಟೊ ತೆಗೆಸಿಕೊಳ್ಳುವ ಭಾಗ್ಯ ಪಡೆದಳು.

*********************

**6 ಅಕ್ಟೋಬರ್ 2019(ರವಿವಾರ)**

ಹುಝುರ್(ಅಬಿಅ) ಮುಂಜಾನೆ 6 ಗಂಟೆ 45 ನಿಮಿಷಕ್ಕೆ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಮುಂಜಾನೆ ಮೇಳೆ ಕಛೇರಿಯ ಕೆಲಸದಲ್ಲಿ ಮಗ್ನನಾಗಿದ್ದರು.

ಇಂದು ಅಹ್ಮದಿಆ ಜಮಾಅತ್ ಫ್ರಾನ್ಸಿನ ಮೂರನೇಯ ಹಾಗೂ ಅಂತಿಮ ದಿನವಾಗಿತ್ತು. ಕಾರ್ಯಕ್ರಮದನ್ವಯ ಮೂರು ಕಾಲು ಗಂಟೆಗೆ ಹುಝುರ್ ಪುರುಷರ ಜಲ್ಸದ ಸಭಾಂಗಣಕ್ಕೆ ಆಗಮಿಸಿದ್ದರು. ಮತ್ತು ಬೈಅತ್ ಸಮಾರಂಭ ಏರ್ಪಟ್ಟಿತ್ತು. ಬೈಅತ್ತಿನ ಈ ಸಮಾರಂಭ MTA INTERNATIONAL ಮೂಲಕ ಲೋಕದ ಎಲ್ಲಾ ರಾಷ್ಟ್ರಗಳಲ್ಲಿ ನೇರ ಪ್ರಸಾರ ಮಾಡಲಾಯಿತು. ಲೋಕದ ವಿವಿಧ ರಾಷ್ಟ್ರಗಲ ಜಮಾಅತ್ತುಗಳು ಪ್ರಸಾರ ಮಾಧ್ಯಮದೊಂದಿಗೆ ತಮ್ಮ ಪ್ರೀಯ ಇಮಾಮರ ಬೈಅತ್ ಪಡೆಯುವ ಭಾಗ್ಯಗಳಿಸಿದರು.

ಇಂದು ಹುಝುರ್(ಅಬಿಅ) ಅವರ ಶುಭಹಸ್ತದಲ್ಲಿ ಅಲ್‌ಜಝಾಏರ್, ಮರಾಕಶ್, ಬೊರ್ಕಿನಾಫಾಸೋ, ಮಾರೀಶಿಯಸ್, ತ್ಯುನಿಸ್, ಫ್ರಾನ್ಸ್, ಕೆಮರೋನ್, ತುರ್ಕಿ, ಮತ್ತು ಕೆಲದೋನಿಯಾದಿಂದ ಸಂಬಂಧಪಟ್ಟವರು 11ಜನ ಬೈಅತ್ ಪಡೆಯುವ ಸೌಭಾಗ್ಯಗಳಿಸಿದರು. ಕೊನೆಯಲ್ಲಿ ಹುಝೂರ್ ದುಆ ಮಾಡಿಸಿದರು. ಅನಂತರ ಹುಝೂರ್ ಝುಹರ್ ಮತ್ತು ಅಸರ್ ನಮಾಝ್‌ಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆ ನಂತರ ಹುಝೂರ್ ಜಲ್ಸಕಾರ್ಯಕ್ಕಾಗಿ ಜಲ್ಸ ಸಭಾಂಗಣಕ್ಕೆ ಆಗಮಿಸಿದ್ದಂತೆಯೇ ಸಭಾಂಗಣವೂ ಮುಗ್ಗಿಲೆತ್ತರ ಘೋಷಣೆಗಳಿಂದ ಮೊಳಗಿತು.

**ಜಲ್ಸ ಸಲಾನ ಫ್ರಾನ್ಸ್ ಸಮಾರೋಪ ಸಮಾರಂಭ**

3 ಗಂಟೆ 40 ನಿಮಿಷಕದಕೆ ಸಮಾರೋಪ ಸಮಾರಂಭವು ಪವಿತ್ರ ಖುರ್‌ಆನ್ ಪಠಣದೊಂದಿಗೆ ಪ್ರಾರಂಭಗಪಂಡಿತು. ಮಾನ್ಯ ಹಾಫಿಜ್ ಸಲೀಮ್ ತೋರೆ ಸಾಹೆಬ್ ಖುರ್‌ಆನ್ ಪಠಣ ಮಾಡಿದರು. ಅದರ ಉರ್ದು ಅನುವಾದ ಮಾನ್ಯ ಮುನವ್ವರ್ ಅಹ್ಮದ್ ಮುಬಶ್ಶರ್ ಸಾಹೆಬ್ ಸ್ಟ್ರಾಸ್‌ಬರ್ಗ್ ಫ್ರಾನ್ಸ್‌ನ ಮುಬಲ್ಲಿಗರು ಪಪ್ರಸ್ತುತ ಪಡಿಸಿದರು.

ಅನಂತರ ಹಝ್ರತ್ ಮಸೀಹ್ ಮೌಊದ್(ಅ) ಅವರ ಅರಬಿ ಖಸೀದದ ಆಯ್ದ ಭಾಗಗಳನ್ನು ಮಾನ್ಯ ಹಂಝು ಬಲಾರಿ ಸಾಹೆಬ್ ಮಧುರ ಕಂಠದಿಂದ ಪ್ರಸ್ತುತ ಪಡಿಸಿದರು. ಅನಂತರ ಮಾನ್ಯ ಮತ್ಲೂಬ್ ಅಹ್ಮದ್ ಸಾಹೆಬ್ ಹಝ್ರತ್ ಮಸೀಹ್ ಮೌಊದ್(ಅ) ಅವರ ಕವನ

**ವೊ ದೇಖ್ತಾ ಹೈ ಗೈರೋಂ ಸೆ ಕ್ಯುಂ ದಿಲ್ ಲಗಾತೆ ಹೋ**

**ಜೋ ಕುಚ್ ಬುತೋಂ ಮೆ ಪಾತೆ ಹೋ ಉಸ್ ಮೆ ವೊ ಕ್ಯಾ ನಹೀಂ.**

ಪ್ರಸ್ತುತ ಪಡಿಸಿದರು.

**ಶೈಕ್ಷಣಿಕ ಪ್ರಶಸ್ತಿಗಳ ವಿತರಣೆ**

ಅನಂತರ ಕಾರ್ಯಕ್ರಮದನ್ವಯ ಹುಝೂರ್(ಅತಬಿ) ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ದರ್ಜೆ ಹೊಂದಿರುವರಿಗೆ 36 ವಿದ್ಯಾರ್ಥಿಗಳನ್ನು ಸನದ್‌ಗಳನ್ನು ನೀಡಿದರು. ಶೈಕ್ಷಣಿಕ ಸನದುಗಳನ್ನು ಪಡೆಯುವ ಆ ಅದೃಷ್ಟವಂತ ವಿದ್ಯಾರ್ಥಿಗಳ ಹೆಸರುಗಳು ಕೆಳಗೆ ನಮೂದಿಸಲಾಗಿದೆ:

| |
|---|
| Noman Rasheed<br>A-Level Human Resource Service & communication |
| Absar Ahmad<br>A-Level Techonology, information & Digital System |
| Aimene Akkouche<br>A-Level Science |
| Shafeeq Muhammad<br>BA Technology |
| Matloob Ahmed<br>BA Electrical Engineering |
| Naseer Ahmed Rajpoot<br>BA Accountancy & Management |
| Mohammad Faheem Afzal<br>BA Science & Techonology |
| Mallak Noman Muzaffar<br>BA Techonology |
| Asadulla |

| |
|---|
| BA Science Electrical Engineering |
| Zeeshan Rasheed<br>Bachelor in Nursing |
| Tauseef Afzal<br>BTEC Higher National Diploma |
| Farzan Ahmed<br>Graduate Chemical comtroll price |
| Sameer Bounpeng<br>Master International & Co-Operate Finance |
| Muhammad Anwar Ahmed<br>Masters in History |
| Saeed Ahmed Rajpoot<br>Masters Finance |
| Hassan Ahmed<br>Master Techonology |
| Ahmed Chettah<br>Master Science, Techonology & Health |
| Fahad Mahmood Bhatt<br>Masters Proffessional in Management Quality |
| Wajahat Chaudhary<br>Masters in Marketing & Commercial Development |
| Tamsaal Mallik<br>Masters Management of Information System |
| Hadi Jamaal Ahmed<br>Masters Management |
| Muhammad Amaan Pere Khalid Mahmood<br>Masters Public Administration |
| Ibrahim Chettah<br>Masters Intellectual property Law |
| Khan Ahmer<br>A-Level Biology |
| Ghulam Ejaz Yasir<br>Maters Embedded Engineering System |
| Muhammad Kahloon<br>Advocat in the Bar of Starssbourge |
| Baijan Nourou Dine<br>Master Cyber Security |

| |
|---|
| Adil Ahmed<br>BTEC Higher International Diploma |
| Shakeel Ahmed<br>Diploma of Management And Accountancy |
| Dapa Sacko<br>P.Hd MRI |
| Nadeem Ahmed Khan<br>Masters in Buisness And Administration |
| Syed Hussain Ali<br>Masters |
| Louis ie Chevellier<br>Masters In Administrative Affairs |
| Rahman Asheer<br>Masters in Human & Social Science |
| Ataul Aleem |

ಶೈಕ್ಷಣಿಕ ಪ್ರಶಸ್ತಿಗಳ ವಿತರಣಾ ಸಮಾರಂಭದ ನಂತರ 4 ಗಂಟೆ 12 ನಿಮಿಷಕ್ಕೆ ಹುಝೂರ್(ಅತಬಿ) ಅವರು ಸಮಾರೋಪ ಭಾಷಣ ಮಾಡಿದರು.

ಹುಝುರ್(ಅಬಿಅ) ಅವರ ಸಮಾರೋಪ ಭಾಷಣ ತಶಹ್ಹುದ್, ತಾಊಝ್, ಸೂರಃ ಫಾತಿಹ ಪಠಿಸಿದ ನಂತರ ಸೂರಃ ಮುಜಾದಿಲದ ವಚನ 22 ಪಠಿಸಿದರು ಮತ್ತು ಅದರ ಅನುವಾದ ವಿವರಿಸಿದರು. ಅನಂತರ ಹುಝೂರ್ ಹೇಳಿದರು: ಅಕ್ಕಾಹನು ಪ್ರವಾದಿಗಳನ್ನು ಕಳುಹಿಸುತ್ತಾನೆಂದರೆ ತಕ್ಷಣದಿಂದ ಅವರಿಗೆ ಜಯ ದೊರೆಯುವುದಿಲ್ಲ. ಬದಲಾಗಿ ವಿರೋಧಿಗಳಿಂದ ವಿರೋಧಗಳ ಬಿರುಗಾಳಿ ಬೀಸುತ್ತದೆ. ಈಗ ಅಂತ್ಯಗೊಳ್ಳುತ್ತದೆ ಆಗ ಅಂತ್ಯಗೊಳ್ಳುತ್ತದೆ ಎಂಬ ಸ್ಥಿತಿ ಉಂಟಾಗುತ್ತದೆ. ಎಲ್ಲ ಪ್ರವಾದಿಗಳ ಇತಿಹಾಸವು ನಮಗೆ ಇದೇ ತೋರಿಸಿಕೊಡುತ್ತದೆ. ವಿರೋಧಿಗಳು ತಮ್ಮ ಎಲ್ಲಾ ಶಕ್ತಿಯನ್ನು ಉಪಯೋಗಿಸುತ್ತಾರೆ ಆದರೆ ಆದರೆ ಅಲ್ಲಾಹನ ವಿಧಿ ಅವರನ್ನೇ ನಾಶಗೊಳಿಸುತ್ತದೆ ಮತ್ತು ಪ್ರವಾದಿಗಳಿಗೆ ಜಯ ಲಭಿಸುತ್ತದೆ, ಪವಿತ್ರ ಖುರ್‌ಆನನ ವಚನ ಇದೀಗ ನಾನು ಪಠಿಸುತ್ತೇನೆ ಅದರಲ್ಲಿ ಅಲ್ಲಾಹನನ್ನು ಇದನ್ನೇ ಪ್ರಸ್ತಾಪಿಸಿದ್ದಾನೆ. ನಾನು ನನ್ನ ಸಂದೇಶವಾಹಕರೂ ಖಂಡಿತವಾಗಿಯು ವಿಜಯಶಾಲಿಗಳಗುವೆವು ಎಂದು ಅಲ್ಲಾಹನು (ವಿಧಿ) ಬರೆದಿರುವೆನು. ಶತ್ರುಗಳು ಅಪಜಯಕ್ಕೆ ಗುರಿಯಾಗುವರು ಹಾಗೂ ಎಂದೂ ಅವರಿಗೆ ಯಶಸ್ಸು ದೊರೆಯುವುದಿಲ್ಲ ಹಝ್‌ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಮತ್ತು ಅವರ ಸಹಾಬ ಅವರಿಗೆ ಅತ್ಯಂತ ಕಠಿಣ ವಿರೋಧ ಎದುರಿಸಬೇಕಾಯಿತು. ಅವರು ಬೆರೆಣಿಕೆ ಎಷ್ಟು ಸಂಖ್ಯೆಯಲ್ಲಿದ್ದರು, ಬಡುವವರಾಗಿದ್ದರೂ, ಶತ್ರುಗಳು ಬಹು ಸುಲಣವಾಗಿ ಅವರನ್ನು ತನ್ನ ಕಾಲು ಕೆಳಗೆ ತುಳಿಯ ಬಹುದು ಎಂದು ಭಾವಿಸಿದ್ದರು. ಅವರನ್ನು ನಾಶ ಮಾಡಬಹುದು ಎಂದು ಭಾವಿಸಿದ್ದರು ಆದರೆ ಆದದ್ದೇನು? ಸ್ವಯಂ ಅವರೇ ತುಳಿಯಲ್ಪಟ್ಟರು.

ಹುಝುರ್(ಅತಬ) ಹೇಳಿದರು: ಈ ಕಾಲದಲ್ಲಿ ಅವರ ಸತ್ಯಪ್ರೇಮಿ ಗುಲಾಮರು ಮಸೀಹ್ ಹಾಗೂ ಮಹ್‌ದಿ ಎಂದು ದಾವೆ ಮಾಡಿದಾಗ ಹಝ್‌ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಭವಿಷ್ಯವಾಣಿಗಳ ಪ್ರಕಾರವೇ ಅಲ್ಲಾಹನು ಅವರಿಗೆ ಕಳುಹಿಸಿದನು. ಅವರ ಸ್ವಯಂ ಘೋಷಿತ ದಾವೆ ಆಗಿರಲಿಲ್ಲ ಅಲ್ಲಾಹನು ಅವರನ್ನು ಸಹ ಹಲವು ಸುವಾರ್ತೆಗಳನ್ನು ನೀಡಿದನು ಪ್ರಗತಿಯ ವಾಗ್ದಾನ ನೀಡಿದನು. ಅವರ ನೆರವಿಗೆ ಬಂದನು ಮತ್ತು ಅವರಿಗೆ ಬೆಂಬಲಿಸಿದನು. ಪ್ರಚಾರ ಕಾರ್ಯ ಪರಿಪೂರ್ಣತೆ ಮತ್ತು ಸನ್ಮಾರ್ಗದ ವಾಗ್ದಾನ ಪೂರ್ಣಗೊಳಿಸುವ ಭರವಸೆ ನೀಡಿದನು. ಅವರಿಗೆ(ಅ) ವಿಜಯಶಾಲಿಯಾಗುವ ಮತ್ತು ಪ್ರಭುತ್ವ ಹೊಂದುವ ಸೂಚನೆ ನೀಡಿದನು. ಎಲ್ಲಾ ಶತ್ರುಗಳು ನಾಶಹೊಂದುವ ಸೂಚನೆಯು ನೀಡಿದನು. ಆದ್ದರಿಂದ ಅವರಿಗೆ **ಕತಬಲ್ಲಾಹು ಲಅಗ್‌ಲಿಬನ್ನ ಅನಾ ವ ರಸೂಲಿಹಿ** ದೇವನಾಣೆಯು

1883 ರಿಂದ 1906ರವರೆಗೆ ವಿವಿಧ ಸಮಯಗಳಲ್ಲಿ ಹಲವು ಸಲ ದೊರೆಯಿತು. ಅಲ್ಲಾಹನು ಅವರಿಗೆ ಭರವಸೆ ನೀಡಿದನು. ಎಲ್ಲಿ ವಿರೋಧಿಗಳ ನಡುವೆಯು ಶತ್ರುಗಳ ಎಲ್ಲ ಪ್ರಯತ್ನಗಳ ನಡವೆಯು ಸರಕಾರಗಳು ವಿರೋಧವಾಗಿದ್ದರೂ ಎಲ್ಲಾ ಧರ್ಮದವರು ಮತ್ತು ಮುಸ್ಲಿಮರು ಎಲ್ಲಾ ವರ್ಗದವರು ಭಗಿರಥಪ್ರಯತ್ನಗಳ ನಡುವೆಯು ಅಲ್ಲಾಹನು ಅವರಿಗೆ ಜಯ ನೀಡುವನು ಮತ್ತು ಜಮಾಅತ್ ಪ್ರಗತಿ ಸಾಧಿಸುತ್ತ ಹೋಗುವುದು.

ಹುಝೂರ್(ಅಬಿಅ) ಹೇಳಿದರು: ಒಂದು ಸಂದರ್ಭದಲ್ಲಿ ಒಂದು ಸಭೆಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ನೆನಪಿಡಿರಿ ಅಲ್ಲಾಹನ ಭಕ್ತದಾದರ ಪರಿಣಾಮ ಎಂದೂ ಕೆಟ್ಟದಾಗುವುದಿಲ್ಲ. ಅವನ ವಾಗ್ದಾನ **ಕತಬಲ್ಲಾಹು ಲಅಗ್‌ಲಿಬನ್ನ ಅನಾ ಡ ರುಸುಲಿ** ಸತ್ಯವಾಗಿದೆ. ಇದು ಜನರು ಅವನ ಪ್ರವಾದಿಗಳನ್ನು ವಿರೋಧಿಸುವಾಗಲೇ ಪೂರ್ಣಗೊಳ್ಳುತ್ತದೆ.

ಮತ್ತೊಂದು ಸ್ಥಳದಲ್ಲಿ ಅವರು(ಅ) ಹೇಳುತ್ತಾರೆ: ಇದು ಅಲ್ಲಾಹನ ನಿಯಮವಾಗಿದೆ ಮತ್ತು ಎಂದಿನಿಂದ ಅವನು ಮನುಷ್ಯನನ್ನು ಈ ಲೋಕದಲ್ಲಿ ಸೃಷ್ಟಿಸಿದ್ದಾನೆ ಆಗಿನಿಂದ ಈ ನಿಯಮವು ಜಾರಿಯಲ್ಲಿದೆ. ಅವನು ತನ್ನ ಪ್ರವಾದಿಗಳನ್ನು, ಮಾರ್ಗದರ್ಶಕರನ್ನು ರಕ್ಷಿಸುತ್ತ ಬಂದಿದ್ದಾನೆ ಮತ್ತು ಪ್ರಭುತ್ವ ನೀಡಿದ್ದಾನೆ. ಅಲ್ಲಹನು ಹೇಳಿದಂತೆ: **ಕತಬಲ್ಲಾಹು ಲಅಗ್‌ಲಿಬನ್ನ ಅನಾ ವರಸುಲಿ** ವಿಜಯದ ಅರ್ಥವು ಪ್ರವಾದಿಗಳು, ಮಾರ್ಗದರ್ಶಕರು ಬಯಸುವುದು ಅಲ್ಲಾಹನ ವಾಗ್ದಾನ ಈಡೇರಬೇಕು ಅದನ್ನು ವಿರೋಧಿಸುವ ಶಕ್ತಿ ಯಾರಿಗೂ ದೊರೆಯಲಾರದು. ಅದೇ ರೀತಿ ಅಲ್ಲಾಹನು ತನ್ನ ಶಕ್ತಿಯುತ ದೃಷ್ಟಾಂತಗಳೊಂದಿಗೆ ತನ್ನ ಸತ್ಯತೆಯನ್ನು ಬಹಿರಂಗಗೊಳಿಸುತ್ತಾನೆ. ಯಾವ ಸತ್ಯವು ಅವನು ಪ್ರಕಟಪಡಿಸ ಬಯಸುತ್ತಾನೋ ಅವರ ಬೀಜ ಪ್ರವಾದಿಗಳ ಕೈಯಿಂದ ಬಿತ್ತರಿಸುತ್ತಾನೆ. ಅದೇ ರೀತಿ ವಿಜಯವಾಗಿದೆ. ಅದರ ತಾತ್ಪರ್ಯವೂ ಅಲ್ಲಾಹನ ಸಂದೇಶವು ತಕ್ಷಣ ಜಾರಿಗೆ ಬರುತ್ತದೆ ಅಲ್ಲಾಹನ ಬೆಂಬಲ ಹೊಂದಿದ ಗಾಳಿ ಬೀಸತೊಡಗುತ್ತದೆ. ಅಲ್ಲಾಹನ ನೆರವಿನ ಗಾಳಿ ಬೀಸುತ್ತದೆ. ಅಲ್‌ವಸಿಯ್ಯತ್‌ನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಹೇಳಿದ್ದಾರೆ: ತನ್ನ ಪ್ರವಾದಿಗಳ ಕೈಯಿಂದ ಅವನು ಬೀಜ ಬಿತ್ತರಿಸುತ್ತಾನೆ, ಆದರೆ ಅವರ ಕೈಗಳಿಂದ ಅದನ್ನು ಪೂರ್ಣಗೊಳಿಸುವುದಿಲ್ಲ. ಬದಲಾಗಿ ಅವರು ನಿಧನ ಹೊಂದಿದ ಬಳಿಕ ವಿರೋಧಿಗಳನ್ನು ಅಪಹಾಸ್ಯಕ್ಕೆ ಗುರಿ ಮಾಡಿದನು ಮತ್ತೆ ತನ್ನ ದ್ವಿತೀಯ ದೈವಿಕ ಶಕ್ತಿಯನ್ನು ತೋರಿಸಿ ಅದರ ಉದ್ದೇಶಗಳನ್ನು ಪೂರ್ಣಗೊಳಿಸುತ್ತಾ ಹೋಗುತ್ತಾನೆ. ಅವರು ಹೇಳಿದರು: ಆ ದ್ವಿತೀಯ ಶಕ್ತಿ ಖಿಲಾಫತ್ ಆಗಿದೆ. ಆದ್ದರಿಂದ ನಾವು ನೋಡುತಿದ್ದೇವೆ ಅಲ್ಲಾಹನು ಯವ ರೀತಿ ಖಿಲಾಫತ್ ಮೂಲಕ ಜಮಾಅತ್ತಿನ ಪ್ರಗತಿ ಮತ್ತು ಅದರ ಉತ್ಥನದ ಮಾರ್ಗ ಸರಳಗೊಳಿಸುರೆದ್ದಾನೆ, ಸ್ವಯಂ ಜನರು ತಮ್ಮ ಮನಸ್ಸಿನಲ್ಲಿ ಈ ಜಮಾಅತ್ತಿಗೆ ಸೇರುವಂತೆ ಪ್ರೇರೇಪಿಸುತ್ತಿದ್ದಾರೆ, ಇಂದು ಒಂದು ಸಣ್ಣ ಕುಗ್ರಾಮದಿಂದ ಒಂದಿದೆ ದಾವೆಯ ಸದ್ದು ಇಡೀ ಲೋಕದಲ್ಲಿ ಮೊಳಗುತ್ತಿದೆ.

**(ಮುಂದುವರಿಯುವುದು)**

## ಇನ್ಸಾನಿಯತ್ ಝಿಂದಾಬಾದ್
## ಮಾನವೀಯತೆ ಚಿರಕಾಲ ಬಾಳಲಿ

### ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೂಹಿಸ್ಸಲಾಮ್ ಹೇಳುತ್ತಾರೆ:–**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ–5, ಪುಟ–48–49, ಮುದ್ರಣ ಖಾದಿಯಾನ್ 2003)

**(ನಝೂರಾತ್ ಇಸ್ಲಾಹ್–ವ–ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

### "ಬದರ್ ವಾರ ಪತ್ರಿಕೆಯ ಮಹತ್ವ ಹಾಗೂ ಅದರ ಉಪಯೋಗಗಳು" ಎಂಬ ಶೀರ್ಷಿಕೆ ಅಡಿಯಲ್ಲಿ ತರಬೇತಿ ಸಭೆ

ಮಡಿಕೇರಿ: ದಿನಾಂಕ 21–02–2020ರಂದು ಜುಮ್‌ಅ ನಮಾಝಿನ ನಂತರ ಮಸ್‌ಜಿದ್ ಬೈತುಲ್ ಹುದಾ ಮಡಿಕೇರಿಯಲ್ಲಿ ಒಂದು ತರಬೇತಿ ಜಲ್ಸ **"ಬದರ್ ವಾರ ಪತ್ರಿಕೆಯ ಮಹತ್ವ ಹಾಗೂ ಅದರ ಉಪಯೋಗಗಳು"** ಎಂಬ ಶೀರ್ಷಿಕೆ ಅಡಿಯಲ್ಲಿ ಹಮ್ಮಿಕೊಳ್ಳಲಾಯಿತು. ಅದರ ಅಧ್ಯಕ್ಷತೆಯನ್ನು ಮಡಿಕೇರಿ ಜಮಾಅತ್ತಿನ ಅಧ್ಯಕ್ಷರಾದ ಜನಾಬ್ ಎಂ.ಬಿ.ಝುಹೀರ್ ಅಹ್ಮದ್ ಸಾಹೆಬ್ ವಹಿಸಿದ್ದರು. ಈ ಸಭೆಯಲ್ಲಿ ಇಬ್ಬರು ಮುಖ್ಯ ಅತಿಥಿಗಳು ಆಗಮಿಸಿದ್ದರು. TV 1 KODAGU ಮಡಿಕೇರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮಾನ್ ಹೆಚ್.ಟಿ. ಅನಿಲ್ ಹಾಗೂ ಶಕ್ತಿ ದಿನ ಪತ್ರಿಕೆಯ ಸಂಪಾದಕರಾದ ಶ್ರೀಮಾನ್ ಜಿ. ಚಿದ್ವಿಲಾಸ್‌ರವರು ಭಾಗವಹಿಸಿದ್ದರು.

ಸ್ಥಳಿಯ ಮುಬಲ್ಲಿಗರಾದ ಹಾಫಿಝ್ ರಫೀಖುಝ್ಝಮಾ ಸಾಹೆಬ್‌ರವರಿಂದ ಪವಿತ್ರ ಖುರ್‌ಆನಿನ ಪಠಣದೊಂದಿಗೆ ಕಾರ್ಯಕ್ರಮ ಆರಂಭವಾಯಿತು, ನಂತರ ಕನ್ನಡ **"ಬದರ್"** ಪತ್ರಿಕೆಯ ಸಂಪಾದಕರಾದ ತಾರಿಖ್ ಅಹ್ಮದ್ ಇದ್ರೀಸ್ ಸಾಹೆಬ್‌ರವರು ಕನ್ನಡ ಬದರ್ ವಾರಪತ್ರಿಕೆಯ ಬಗ್ಗೆ ವಿವರಣೆಯನ್ನು ನೀಡುತ್ತಾ ಪತ್ರಿಕೆಯು 1902ರಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತ್ತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರ ಸಮಯದಲ್ಲಿ ಉರ್ದು ಭಾಷೆಯಲ್ಲಿ ಆರಂಭವಾಯಿತು. ಬದರ್ ಎಂಬ ಪದದ ಅರ್ಥ ಬೆಳದಿಂಗಳು ಎಂದಾಗಿದ್ದು, 118 ವರ್ಷಗಳು ಪೂರ್ಣಗೊಳ್ಳುತ್ತಿರುವ ಈ ಸಂಧರ್ಭದಲ್ಲಿ ಪತ್ರಿಕೆಯು ಕನ್ನಡ ಭಾಷೆಯಲ್ಲಿಯೂ ಆರಂಭವಾಗುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸುತ್ತಾ ಪತ್ರಿಕೆಯ ಮಹತ್ವ ಹಾಗೂ ಅದರ ಉಪಯೋಗಗಳ ಬಗ್ಗೆ ತಿಳಿಸಿದರು.

ಅನಂತರ ಮುಖ್ಯ ಅತಿಥಿಯಾದ ಹೆಚ್.ಟಿ. ಅನಿಲ್ ಮಾತನಾಡಿ ಧಾರ್ಮಿಕ ಪತ್ರಿಕೆಗಳು ಆಯಾ ಧರ್ಮದ ನಿಜಸಾರವನ್ನು ಪ್ರಕಟಿಸುವ ಮೂಲಕ ಎಲ್ಲಾ ಧರ್ಮಿಯರಲ್ಲಿಯೂ ತಮ್ಮ ಧರ್ಮದ ವಿಚಾರಗಳ ಬಗ್ಗೆ ಮನವರಿಕೆ ಮಾಡಿಕೊಡುವಂತಾಗಬೇಕು ಎಂದು ಆಶಿಸಿದರು. ಬೆಳದಿಂಗಳು ಎಂಬ ಕನ್ನಡ ಪದದ ಉರ್ದು ರೂಪವಾದ ಬದರ್ ಎಂಬ ಹೆಸರಿನ ಪತ್ರಿಕೆಯನ್ನು ಕನ್ನಡದಲ್ಲಿ ಪ್ರಕಟಿಸುವ ಮೂಲಕ ಧಾರ್ಮಿಕ ಸಂಧೇಶವನ್ನು ಸುಲಭವಾಗಿ ಹೆಚ್ಚಿನವರಿಗೆ ತಲುಪಿಸುವಲ್ಲಿ ಶ್ಲಾಘನೀಯ ಹೆಜ್ಜೆ ಇಡಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಇನ್ನೊಬ್ಬ ಮುಖ್ಯ ಅತಿಥಿಯಾದ ಶಕ್ತಿ ದಿನ ಪತ್ರಿಕೆಯ ಸಂಪಾದಕರಾದ ಶ್ರೀಮಾನ್ ಜಿ. ಚಿದ್ವಿಲಾಸ್ ರವರು ಮಾತನಾಡಿ ಧಾರ್ಮಿಕ ಪ್ರಜ್ಞೆಯನ್ನು ಮುಂದಿನ ಪೀಳಿಗೆಯಲ್ಲಿ ಬೆಳೆಸುವ ಮೂಲಕ ಸ್ವಸ್ಥ ಸಮಾಜವನ್ನು ರೂಪಿಸಬೇಕಾದ ಹೊಣೆಗಾರಿಕೆ ಪ್ರತಿ ಧರ್ಮದ ಮುಖಂಡರ ಮೇಲಿದೆ. ಯಾರಲ್ಲಿ ಪ್ರೀತಿ, ತಾಳ್ಮೆ, ಸೌಹಾರ್ಧತೆ, ಸಹಭಾಳ್ವೆಯ ಚಿಂತನೆಯಿರುತ್ತದೆ ಅಂಥವರ ಜೀವನ ಸುಂಧರವಾಗಿರುತ್ತದೆ. ಅಂತಹ ಸುಂದರ ಚಿಂತನೆಯಿಂದ ಆರಂಭವಾದ ಈ ಪತ್ರಿಕೆ 100ಕ್ಕೂ ಅಧಿಕ ವರ್ಷಗಳನ್ನು ಪೂರೈಸಿ ಕನ್ನಡಕ್ಕೆ ಪ್ರವೇಶಿಸುತ್ತಿರುವುದು ಕನ್ನಡ ಪತ್ರಿಕಾ ಕ್ಷೇತ್ರಕ್ಕೆ ದೊಡ್ಡ ಒಂದು ಕೊಡುಗೆ. ಇಂತಹ ಧಾರ್ಮಿಕ ಪತ್ರಿಕೆಗಳ ಅವಶ್ಯಕತೆ ನಮಗೆ ಬಹಳ ಇದೆ ಎಂದು ಶುಭಕೋರಿದರು

ಅನಂತರ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಡಿಕೇರಿ ಅಹ್ಮದಿಯಾ ಜಮಾಅತ್ತಿನ ಅಧ್ಯಕ್ಷರಾದ ಎಂ.ಬಿ.ಝುಹೀರ್ ಅಹ್ಮದ್ ಸಾಹೆಬ್‌ರವರು ಮುಖ್ಯ ಅತಿಥಿಗಳಿಗೆ ಹಾಗೂ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾಧಗಳನ್ನು ಅರ್ಪಿಸುತ್ತಾ ಬದರ್ ಪತ್ರಿಕೆಯ ಕನ್ನಡದಲ್ಲಿ ಮಡಿಕೇರಿಯಿಂದ ಆರಂಭವಾಗುತ್ತಿದ್ದು, ಭಾರತದ 7 ಭಾಷೆಗಳಲ್ಲಿ ಈಗಾಗಲೆ ಪ್ರಕಟನೆಗೊಳ್ಳುತ್ತಿದ್ದು ಕನ್ನಡದಲ್ಲೂ ಆರಂಭವಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. ಸದಸ್ಯರಿಗೆ ತರಬೇತಿ ನೀಡಲು ಇದು ಉತ್ತಮವಾದ ಮಾಧ್ಯಮವಾಗಿದ್ದು. ಆಧ್ಯಾತ್ಮಿ ರಂಗದಲ್ಲಿ ಪ್ರಗತಿ ಕಾಣಬೇಕಾದಲ್ಲಿ ಧಾರ್ಮಿಕ ತಿಳುವಳಿಕೆಯನ್ನು ಹೆಚ್ಚಾಗಿ ಹೊಂದಿರಬೇಕು ಈ ನಿಟ್ಟಿನಲ್ಲಿ ಬದರ್ ಪತ್ರಿಕೆ ಕಾರ್ಯಪ್ರವೃತ್ತವಾಗಲಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮವನ್ನು ಜಿ.ಎಂ. ಮೊಹಮ್ಮದ್ ಶರೀಫ್ ಸಾಹೆಬ್ ನಿರೂಪಿಸಿದರು. **(ವರದಿ: ಎಂ.ಯು.ಖದೀರ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

TITLE NO: PUNKAN00001
Weekly **BADAR** Qadian
Distt: Gurdaspur (Pb.) INDIA Qadian - 143516
Vol No.1 Thursday, 12 March 2020 Issue No. 09

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಯೂರೋಪ್ ಪ್ರವಾಸ (ಸೆಪ್ಟೆಂಬರ್, ಅಕ್ಟೋಬರ್ 2019)*

**(ಬದರ್ ಸಂಚಿಕೆ 08ರ ವರದಿಯ ಉಳಿದ ಭಾಗ)**

ಹುಝೂರ್(ಅಬಿಅ) ಹೇಳಿದರು. ಇಸ್ಲಾಮಿನ ಸ್ಪಷ್ಟವಾದ ಶಿಕ್ಷಣವಾಗಿದೆ. "ಬಲವಂತದಿಂದ ಧರ್ಮ ಪರಿವರ್ತನೆ ಮಾಡಿಸುವುದು, ದೌರ್ಜನ್ಯದಿಂದ ಇತರರ ಮೇಲೆ ಜಯ ಸಾಧಿಸುವುದು ನಿಷಿದ್ಧವಿದೆ. ಅಲ್ಲದೇ ಶಾಂತಿ ಮತ್ತು ಸಾಮಾಜಿಕ ರಕ್ಷಣೆಯ ವಿರುದ್ಧವೂ ಯಾವುದೆ ಆತಂಕಕಾರಿ ಕ್ರಮಗಳು ನಿಷಿದ್ಧವಿದೆ. ರಸೂಲುಲ್ಲಾಹ್(ಸ) ಎಲ್ಲಾ ಸಂದರ್ಭದಲ್ಲಿ ಭಾತೃತ್ವ ಮತ್ತು ಕರುಣೆಯನ್ನು ಪ್ರದರ್ಶಿಸಿದರು. ಅವರು ಉಪದೇಶಿಸಿದರು. ನೈಜ ಮುಸಲ್ಮಾನನೆಂದರೆ ಅವನ ನಾಲಿಗೆಯಿಂದಾಗಲೀ, ಕೈಯಿಂದಾಗಲೀ ಸುರಕ್ಷಿತನಾಗಿದ್ದವನು ಮಾತ್ರ. ಅವರು ಇಲ್ಲಿ ಯಾವ ತಾರತಮ್ಯವೂ ಮಾಡಲಿಲ್ಲ. ಕೇವಲ ಮುಸ್ಲಿಮರೊಂದಿಗೆ ಕರುಣೆಯಿಂದ ವ್ಯವಹರಿಸಲು ಹೇಳಲಿಲ್ಲ. ಬದಲಾಗಿ ಸ್ಪಷ್ಟವಾಗಿ ಹೇಳಿದರು. ವಿಶ್ವಾಸಗಳ ಭೇದ ಭಾವವಿಲ್ಲದೆ ಸಾಮಾಜಿಕ ಭದ್ರತೆಗೆ ಬದ್ಧರಾಗಲು ಉಪದೇಶಿಸಿದ್ದಾರೆ. ಆದ್ದರಿಂದ ಉಗ್ರವಾದಿಗಳು Night club ಗಳಲ್ಲಿ concernt Hall ಗಳಲ್ಲಿ studiums ಗಳಲ್ಲಿ ಆತ್ಮಹತ್ಯೆ ಬಾಂಬ್‌ಗಳನ್ನು ಎಸೆಯುತ್ತಾರೆ ಅಥವಾ ಬುದ್ಧಿಶೂನ್ಯರ ಹಾಗೆ ಜನಸಂದಣಿಯಲ್ಲಿ ವಾಹನಗಳನ್ನು ನುಗ್ಗಿಸುತ್ತಾರೆ. ಅವರು ಅತ್ಯಂತ ಪೈಶಾಚಿಕ ಮತ್ತು ದೌರ್ಜನ್ಯ ರೂಪದಲ್ಲಿ ಇಸ್ಲಾಮಿ ಶಿಕ್ಷಣವನ್ನು ವಿರೋಧಿಸುವವರಾಗಿದ್ದಾರೆ.

ಹುಝೂರ್(ಅಬಿಅ) ಹೇಳಿದರು. ಪವಿತ್ರ ಖುರ್‌ಆನ್ ಪ್ರಾಥಮಿಕ ಹಂತದಿಂದಲೇ ಮಾನವ ಹಕ್ಕುಗಳ ನೆಲೆಯಲ್ಲಿ ಧಾರ್ಮಿಕ ಸ್ವಾತಂತ್ರ್ಯ ಅಲ್ಲದೇ ಇನ್ನುಳಿದ ಹಲವು ದಿನನಿತ್ಯ ಜೀವನ ಕ್ರಮಗಳ ಸಿದ್ಧಾಂತಗಳನ್ನು ಕಲಿಸಿದೆ. ಆ ಮೂಲಕ ಜನರು ಜನಾಂಗೀಯ ಹಾಗೂ ವಿಶ್ವಾಸಗಳ ಭೇದವಿಲ್ಲದೇ ಪರಸ್ಪರ ಸೌಹಾರ್ಧತೆಯಿಂದ ಶಾಂತಿಯಿಂದ ಜೀವನ ನಡೆಸುತ್ತಾರೆ. ಉದಾಹರಣೆಗೆ ಸೂರಃ ಅಲ್ ಬಖರದ ವಚನ 189 ರಲ್ಲಿ ಪವಿತ್ರ ಖುರ್‌ಆನ್ ನ್ಯಾಯಯುತ ವ್ಯಾಪಾರದ ಕುರಿತು ಪ್ರಸ್ತಾಪಿಸಿದೆ. ಅದರಲ್ಲಿ ಸಾಂಪತ್ತಿಕ ವ್ಯವಹಾರ ಅಥವಾ ಕೊಡು ಕೊಳ್ಳುವ ವಿಷಯವಾಗಿ ನ್ಯಾಯಯುತವಾಗಿ ವರ್ತಿಸಲು ಉಪದೇಶಿಸಿದೆ. ಈ ವಚನದಲ್ಲಿ ಅಲ್ಲಾಹನು ಮುಸಲ್ಮಾನರಿಗೆ ಉಪದೇಶ ನೀಡಿದೆ. ಮೋಸ ವಂಚನೆಯಿಂದ ಸಂಪತ್ತು ಪಡೆಯಬಾರದು. ಬದಲಾಗಿ ಭರವಸೆ ವಿಶ್ವಾಸದಿಂದ ವ್ಯವಹರಿಸುವ ಶಿಕ್ಷಣ ನೀಡಿದೆ. ಏಕೆಂದರೆ ವಿವಿಧ ಜನರ ಮಧ್ಯೆ ಒಡಕು ಹಾಗೂ ಹಗೆತನ ಬರಬಾರದು.

ಹುಝೂರ್(ಅಬಿಅ) ಹೇಳಿದರು. ಇಸ್ಲಾಮ್ ಅನ್ಯಾಯವಾಗಿ ಮಾಡುವ ವ್ಯಾಪರ ಮತ್ತು ಮೋಸಾಧಾರಿತ ವ್ಯವಹಾರದಿಂದ ಉಳಿಯಲು ಉಪದೇಶಿಸುತ್ತದೆ. ಏಕೆಂದರೆ ಇದರಿಂದ ಸಮಾಜದಲ್ಲಿ ಅಶಾಂತಿ ಉಂಟಾಗುತ್ತದೆ. ಲೋಕದಲ್ಲಿ ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿಯೂ ಸ್ವಾರ್ಥ ಮತ್ತು ವ್ಯಾಮೋಹ ವ್ಯಾಪಿಸಿದ ಕಾರಣ ಇಷ್ಟೊಂದು ಒಡಕು ಹಾಗೂ ಕಷ್ಟ ಕಾರ್ಪಣ್ಯಗಳು ಎದುರಿಸುತ್ತಿದ್ದೇವೆ. ಆದ್ದರಿಂದ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ನ್ಯಾಯ, ಸಮಾನತೆಯ ಸಿದ್ಧಾಂತಗಳು ಅತ್ಯಮೂಲ್ಯವಾಗಿವೆ. ಸೂರಃ ಅಲ್ ಮುತಫ್ಫಿಫೀನ್ ವಚನ 44 ರಲ್ಲಿ ಪವಿತ್ರ ಖುರ್‌ಆನ್ ಹೀಗೆ ಪ್ರಸ್ತಾಪಿಸಿದೆ. ಅಳತೆಯಲ್ಲಿ ಕಮ್ಮಿ ಮಾಡಿ ಕೊಡುವವರಿಗೆ ಮಹಾನಾಶ. ಎಂದರೆ ಬೇರೆಯವರಿಗೆ ಅಳತೆ ಅಥವಾ ಮಾತನಾಡಿ ಕೊಡುವಾಗ ಕಡಿಮೆ ಮಾಡುತ್ತಾರೆ. ಈ ವಚನಗಳಿಂದ ಸಾಬೀತಾಗುತ್ತದೆ. ಯಾರು ವ್ಯಾಪಾರದಲ್ಲಿ ಹೆಚ್ಚು ಕಡಿಮೆ ಮಾಡಿ ಶೋಷಣೆ ಮಾಡುತ್ತಾರೆ, ಯಾರು ಬೇರೆಯವರಿಗೆ ಕಡಿಮೆ ಕೊಡುತ್ತಾರೆ ಮತ್ತು ಪಡೆಯುವಾಗ ಸಮಾನತೆಯನ್ನು ಬಯಸುತ್ತಾರೆ. ಮೋಸ ವಂಚನೆಯಿಂದ ವ್ಯವಹರಿಸುತ್ತಾರೆ ಅವರ ಮೇಲೆ ಶಾಪ ಹಾಕಲಾಗಿದೆ ಮತ್ತು ಅವರನ್ನು ಸುಳ್ಳುಗಾರರಲ್ಲಿ ಹಾಗೂ ನರಕವಾಸಿಗಳಲ್ಲಿ ಪರಿಗಣಿಸಲಾಗಿದೆ.

ಹುಝೂರ್(ಅಬಿಅ) ಹೇಳಿದರು. ಪವಿತ್ರ ಖುರ್‌ಆನ್ ಅಂತರರಾಷ್ಟ್ರೀಯ ಸಂಬಂಧವಾಗಿ, ಆಂತರಿಕ ವಿರೋಧಗಳ ಅಥವಾ ವಿವಿಧ ಸಮುದಾಯಗಳಲ್ಲಿ ಬೆಳೆಯುತ್ತಿರುವ ಭಿನ್ನತೆಗಳನ್ನು ಪರಿಹರಿಸುವ ಕುರಿತು ಮಾರ್ಗದರ್ಶನ ನೀಡಿದೆ. ಇಸ್ಲಾಮಿನ ಉದ್ದೇಶ ಯಾವಾಗಲೂ ಶಾಶ್ವತವಾಗಿ ಶಾಂತಿಸ್ಥಾಪನೆ ಮಾಡುವುದು ಮತ್ತು ದ್ವೇಷ ಹಾಗೂ ಹಗೆತನವನ್ನು ಕೊನೆಗಾಣಿಸುವುದು ಆಗಿದೆ. ಉದಾಹರಣೆಗೆ ಸೂರಃ ಅಲ್ ಹುಜುರಾತ್ ವಚನ 10ರಲ್ಲಿ ಪ್ರಸ್ತಾಪಿಸಲಾಗಿದೆ. ಸತ್ಯ ವಿಶ್ವಾಸಿಗಳ ಬಗ್ಗೆ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣವೆಸಗಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಅವರ ವಿರುದ್ಧ ಹೋರಾಡಿರಿ. ಅನಂತರ ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಾಗಿ ಸಂಧಾನ ಮಾಡಿಸಿರಿ ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ.

ಹುಝೂರ್(ಅಬಿಅ) ಹೇಳಿದರು. ನನ್ನ ವಿಶ್ವಾಸ ಈ ಅಸಾಮಾನ್ಯ ಖುರ್‌ಆನಿನ ಸಿದ್ಧಾಂತವು ಕೇವಲ ಮುಸ್ಲಿಮರಿಗೆ ಮಾತ್ರವಲ್ಲ ಬದಲಾಗಿ ಜಾಗತಿಕ ನೆಲೆಯಲ್ಲಿ, ಸಮಸ್ಯೆಗಳನ್ನು ಪರಿಹರಿಸಲು ಬುನಾದಿಯನ್ನು ಒದಗಿಸುತ್ತದೆ. ಇದರಂತೆ ನಡೆದುಕೊಂಡರೆ ಲೋಕದಲ್ಲಿ ಸ್ಥಿರತೆ ಮತ್ತು ಶಾಶ್ವತವಾದ ಶಾಂತಿ ಪಡೆಯಬಹುದಾಗಿದೆ. ಹಲವು ಮುಸ್ಲಿಮ್ ರಾಷ್ಟ್ರಗಳು ಈ ಖುರ್‌ಆನಿನ ಸಿದ್ಧಾಂತವನ್ನು ಪಾಲಿಸದಿರುವುದು ಕಂಡು ತುಂಬ ವಿಷಾಧ ಎನಿಸುತ್ತದೆ. ಅದರ ಪರಿಣಾಮವಾಗಿಯೇ ಮೂರ್ಖತನದಿಂದ ಕೂಡಿದ ಸಮಸ್ಯೆಗಳಲ್ಲಿ ಸಿಲುಕಿಕೊಂಡಿದ್ದಾರೆ. ಮತ್ತು ನಿರಂತರವಾಗಿ ದೌರ್ಜನ್ಯ ಹಾಗೂ ಅನ್ಯಾಯದ ಸಂಕೋಲೆಗಳಲ್ಲಿ ಬಂಧಿತರಾಗಿದ್ದಾರೆ. ಈ ಹಿಂದೆಯೇ ವಿವರಿಸಿದಂತೆ ಈ ವಚನವು ಜಯಗಳಿಸಿದ ನಂತರ ಸೋತವರ ಮೇಲೆ ಒತ್ತಡ ಹೇರಬಾರದು ಮತ್ತು ಅವರಿಗೆ ಅವಹೇಳನ ಮಾಡಬಾರದೆಂದು ತಿಳಿಸಿದೆ. ಇದರಲ್ಲಿ ಜಾಣ್ಮೆತನವು ಸ್ಪಷ್ಟವಿದೆ. ಸೋತವರಿಗೆ ಅವಹೇಳನ ಮಾಡಿದರೆ ಶಾಂತಿ ಹೆಚ್ಚು ಸಮಯದವರೆಗೆ ಇರಲಾರದು. ಬದಲಾಗಿ ಆ ಸಮುದಾಯದ ಮುಖಂಡರಲ್ಲಿ, ಪ್ರಜೆಗಳಲ್ಲಿ ಅಸಮಾಧಾನ ಮತ್ತು ಕ್ಲಿಷ್ಟತೆ ಉಂಟಾಗುವುದು. ಇದರ ಬದಲಾಗಿ ಸೋತ ಸಮುದಾಯದೊಂದಿಗೆ ಪ್ರೀತಿ ಹಾಗೂ ನ್ಯಾಯಯುತವಾಗಿ ವರ್ತಿಸಿದರೆ ಪರಸ್ಪರ ಭರವಸೆ ಮತ್ತು ಗೌರವ ಬೆಳೆಯುವುದು.

ಹುಝೂರ್(ಅಬಿಅ) ಹೇಳಿದರು. ನಾವು ಇಂದು ನೋಡುತ್ತಿರುತ್ತೇವೆ. ಬೃಹತ್ ಶಕ್ತಿಗಳು ಶಾಂತಿ ಸ್ಥಾಪನೆಯ ಹೆಸರಿನಲ್ಲಿ ದೌರ್ಜನ್ಯ ಹಾಗೂ ಅನ್ಯಾಯವನ್ನು ಎಸಗುತ್ತಾರೆ. ಅದರ ಪರಿಣಾಮವಾಗಿ ಅಸಮಾಧಾನ ಹಾಗೂ ಶತ್ರುತನ ಬೆಳೆಯತೊಡಗುತ್ತದೆ. ಇದರ ಅರ್ಥ ಪ್ರತಿ ವಿಧದ ಶಾಂತಿ ಒಪ್ಪಂದವು ಒಂದು ಸೂಕ್ಷ್ಮ ವಿಷಯವಾಗಿರುತ್ತದೆ. ಎಂದಾದರೂ ಒಪ್ಪಂದ ಮುರಿಯುವ ಅಪಾಯವಿರುತ್ತದೆ. ಈ ತರಹ ಅಸ್ಥಿರತೆಯಿಂದಾಗಿ ಯಾರಿಗೂ ಯಾವ ಪ್ರಯೋಜನವು ದೊರೆಯುವುದಿಲ್ಲ. ಬದಲಾಗಿ ಇದರ ಲಾಭ ಪಡೆದು ಉಗ್ರವಾದಿಗಳು, ಆತಂಕವಾದಿಗಳು ನಿರಾಶ್ರಿತ ಜನರನ್ನು ಗುರಿಪಡಿಸುತ್ತಾರೆ ಮತ್ತು ಇದರ ಪರಿಣಾಮ ನಮ್ಮ ಮುಂದಿದೆ. ಪೂರ್ವ ಪಶ್ಚಿಮ ಎರಡರಲ್ಲೂ ಶಾಂತಿ ಮತ್ತು ಸಮೃದ್ಧಿಯ ನೀಲಿ ಆಕಾಶದ ಮೇಲೆ ಅನ್ಯಾಯ ಮತ್ತು ಯುದ್ಧಗಳ ಕಾರ್ಮೋಡ ಆವರಿಸುತ್ತಿವೆ. ಲೋಕದ ಬಹುತೇಕ ಸಮುದಾಯಗಳು, ಒಳಜಗಳ, ಸೇಡು ಹಾಗೂ ಇವೆರಡನ್ನು ಹೀಯಾಳಿಸುವ ಗುರಿಯೊಂದಿಗೆ ಛಿದ್ರಗೊಂಡಿವೆ. ಅಶಾಂತಿಯ ಈ ಸ್ಥಿತಿ ಎಲ್ಲಿಯವರೆಗೆ ಮುಂದುವರೆಯುವುದು ಎಂದರೆ, ಅಂತರರಾಷ್ಟ್ರೀಯ ಸಂಬಂಧಗಳು ನ್ಯಾಯ ಸಮಾನತೆ ಆಧಾರದಲ್ಲಿ ಇತರರ ಹಕ್ಕುಗಳನ್ನು ರಕ್ಷಿಸುವುದಿಲ್ಲವೋ ಅಲ್ಲಿಯತನಕ ಇದೇ ಸ್ಥಿತಿ

***(ಉಳಿದ ವರದಿ ಪುಟ ಸಂಖೆ 07 ರಲ್ಲಿ ಓದಿರಿ)***

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.